ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ ೨ನೇ ಡಿಸೆಂಬರ್ ೧೯೯೧, ಮಾರ್ಗಶಿರ ೧೧, ಶಕ ೧೯೧೩

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೨೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನ ಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಕೆ. ಲಕ್ಕಪ್ಪನವರು ಹಾಗೂ ಶ್ರೀಯುತರುಗಳಾದ ಎಂ. ಶ್ರೀನಿವಾಸ ನಾಯಕ್, ಎನ್.ಎಚ್. ಗೌಡ, ಎಂ.ಎನ್. ಮಹಂತ ದೇವರು, ಟಿ.ವಿ. ಚಂದ್ರಶೇಖರಪ್ಪ, ಹಲಸನಾಡ್ ಸುಬ್ಬರಾವ್, ಕಾಂತರಾಜಪುರದ ಲಕ್ಕಪ್ಪ, ಬಿ.ಎಂ. ಉಮರಬ್ಬ, ಹೆಚ್. ಸಿ. ಲಿಂಗಾರೆಡ್ಡಿ ಎ. ಆರ್. ಸೋಮನಾಥ್ ಅಯ್ಯರ್ ಹಾಗೂ ಕಾಪು ಸಂಜೀವಶೆಟ್ಟಿ ಅವರುಗಳ ನಿಧನದ ಸುದ್ದಿಯನ್ನು ನೊಂದ ಮನಸ್ಸಿನಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ. ಶ್ರೀ ಮಣಿಲ್ ಶ್ರೀನಿವಾಸನಾಯಕ್‌ರವರು ಮೂರನೇ ವಿಧಾನಸಭೆಯ ಸದಸ್ಯರಾಗಿದ್ದರು. ಅವರು ದಿನಾಂಕ 25-10-1991ರಂದು ನಿಧನರಾದರು. ಶ್ರೀಯುತರು 1961ರಿಂದ 1966ರವರೆಗೆ ಮಂಗಳೂರು ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಸಮಾಜದ ಹಲವಾರು ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದು ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. 8ನೇ ವಿಧಾನಸಭೆ ಸದಸ್ಯರಾಗಿದ್ದ ಶ್ರೀ ಎನ್.ಎಚ್. ಗೌಡರು ದಿನಾಂಕ 27-10-1991ರಂದು ನಿಧನರಾಗಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದ ಶ್ರೀ ಗೌಡರು ಹಲವಾರು ಪಂಚಾಯತಿ ಹಾಗೂ ಸಹಕಾರ ಕ್ಷೇತ್ರ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿದ್ದರು.

ಶ್ರೀಯುತರು ಕುಮಟಾ ವಿಧಾನ ಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಎಂ.ಎನ್. ಮಹಂತದೇವರು ಅವರು ದಿನಾಂಕ 15-11-1991ರಂದು ನಿಧನರಾಗಿದ್ದಾರೆ. ಶ್ರೀಯುತರು 1937 ರಿಂದ 1940 ರವರೆಗೆ ಟಿ. ನರಸೀಪುರ ಕ್ಷೇತ್ರದಿಂದ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರತಿನಿಧಿಯಾಗಿದ್ದರು. 1949ರಿಂದ 1952 ರವರೆಗೂ ಮೈಸೂರು ಪ್ರಜಾ ಸಂವಿಧಾನ ರಚನಾ ಸಭೆಯ ಸದಸ್ಯರಾಗಿದ್ದರು. ಶ್ರೀಯುತರು ಈಗ ನಮ್ಮ ಈ ವಿಧಾನ ಸಭೆಯ ಸದಸ್ಯರಾದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು ಪೂಜ್ಯ ತಂದೆಯವರು. ಮಾಜಿ ಲೋಕಸಭಾ ಸದಸ್ಯರಾಗಿದ್ದ ಶ್ರೀ ಟಿ.ವಿ. ಚಂದ್ರಶೇಖರಪ್ಪನವರು ದಿನಾಂಕ 18-11-91ರಂದು ಬೆಂಗಳೂರಿನಲ್ಲಿ ನಿಧನರಾದರು.

ಶ್ರೀಯುತರು ಶಿವಮೊಗ್ಗ ಲೋಕಸಭಾ ಕ್ಷೇತ್ರವನ್ನು ಎರಡು ಬಾರಿ ಹಾಗೂ ದಾವಣಗೆರೆ ಲೋಕಸಭಾ ಕ್ಷೇತ್ರವನ್ನು ಒಂದು ಬಾರಿ ಸಂಸತ್ತಿನಲ್ಲಿ ಪ್ರತಿನಿಧಿಸಿದ್ದಾರೆ. ಶ್ರೀಯುತರು 1978-79 ರ ವರೆಗೆ ರಾಜ್ಯ ಸಭೆಯ ಸದಸ್ಯರಾಗಿದ್ದರು. ಕೃಷಿ ಸಂಘಟನಾ

ಕಾರ್ಯದರ್ಶಿಯಾಗಿ, ಗ್ರಾಮೀಣ ಜನತೆಯ ಏಳಿಗೆಗಾಗಿ ಬಹಳಷ್ಟು ಶ್ರಮಿಸಿದ್ದಾರೆ. ನಾಲ್ಕನೇ ವಿಧಾನಸಭಾ ಸದಸ್ಯರಾಗಿದ್ದ ಶ್ರೀ ಹಲಸನಾಡ್ ಸುಬ್ಬರಾವ್ ಅವರು ದಿನಾಂಕ 1.11.1991ರಂದು ಕುಂದಾಪುರದಲ್ಲಿ ನಿಧನರಾದರು. ಶ್ರೀಯುತರು ಬೈಂದೂರು ಕ್ಷೇತ್ರವನ್ನು ಪ್ರತಿನಿಧಿಸಿದ್ದಾರೆ. ಶ್ರೀಯುತರು ಬಡವರ. ದೀನದಲಿತರ ಏಳಿಗೆಗಾಗಿ ಶ್ರಮಿಸಿದ್ದಾರೆ. ಮಾಜಿ ಲೋಕೋಪಯೋಗಿ ಸಚಿವರಾಗಿದ್ದ ಶ್ರೀಯುತ ಕಾಂತರಾಜ್ ಪುರವ ಲಕ್ಕಪ್ಪನವರು ದಿನಾಂಕ 23.11.91 ರಂದು ಬೆಂಗಳೂರಿನಲ್ಲಿ ನಿಧನರಾದರು.

ಶ್ರೀಯುತರು ಗ್ರಾಮೀಣ ಅಭಿವೃದ್ಧಿ, ಸಹಕಾರ ಚಳುವಳಿ, ಹಾಗೂ ರೈತರ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಶ್ರೀಯುತರು 1966ರಿಂದ 1978ರವರೆಗೆ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಈ ಸಭೆಯ ಮಾಜೀ ಸದಸ್ಯರಾಗಿದ್ದ ಶ್ರೀಯುತ ಬಿ.ಎ. ಉಮರಬ್ಬನವರು ದಿನಾಂಕ 24.11.91 ರಂದು ಬೆಂಗಳೂರಿನಲ್ಲಿ ನಿಧನರಾದರು. ಶ್ರೀಯುತರು ವಿಟ್ಲ ವಿಧಾನಸಭಾ ಕ್ಷೇತ್ರವನ್ನು ಎಂಟನೇ ವಿಧಾನಸಭೆಯಲ್ಲಿ ಪ್ರತಿನಿಧಿಸಿದ್ದರು. ವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದು ಶ್ರೀಯುತರು ಕಾರ್ಮಿಕ ನಾಯಕರಾಗಿ ಸೇವೆ ಸಲ್ಲಿಸಿದ್ದಾರೆ. ಮಾಜಿ ಸಚಿವರೂ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದು, ಶ್ರೀಯುತ ಹೆಚ್.ಸಿ.ಲಿಂಗಾರೆಡ್ಡಿ ಅವರು ದಿನಾಂಕ 26.11.91 ರಂದು ಕೋಲಾರ ದಲ್ಲಿ ನಿಧನರಾದರು. ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀಯುತರು ಸಂವಿಧಾನ ರಚನಾ ಸಭೆಯ ಸದಸ್ಯರಾಗಿದ್ದರು. 1959ರಿಂದ 1962ರವರೆಗೆ ಬಿ.ಡಿ. ಜತ್ತಿ ಅವರ ಸಚಿವ ಸಂಪುಟದಲ್ಲಿ ಯೋಜನೆ ಮತ್ತು ಅಭಿವೃದ್ಧಿ ಖಾತೆಯ ಉಪಮಂತ್ರಿಗಳಾಗಿದ್ದರು. ಶ್ರೀಯುತರು 1966ರಿಂದ 1970ರವರೆಗೆ ಶ್ರೀಮಾನ್ ವೀರೇಂದ್ರ ಪಾಟೀಲರ ಸಚಿವ ಸಂಪುಟದಲ್ಲಿ ಮೀನುಗಾರಿಕೆ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ. 1964ಲ್ಲಿ ಲೋಕಸಭೆಗೆ ಆಯ್ಕೆಯಾಗಿದ್ದ ಅವರು ರಾಜ್ಯ ವಿಧಾನ ಸಭೆಗೆ ಮಾಲೂರು ಕ್ಷೇತ್ರದಿಂದ ಮೂರು ಬಾರಿ ಪ್ರತಿನಿಧಿಸಿದ್ದರು. ಶ್ರೀಯುತರು ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ರಾಜ್ಯದ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯ ಮೂರ್ತಿ ಹಾಗೂ ರಾಜ್ಯದ ಹಂಗಾಮಿ ರಾಜ್ಯಪಾಲರಾಗಿದ್ದ ಶ್ರೀಯುತ ಎ.ಆರ್. ಸೋಮನಾಥ ಅಯ್ಯರ್ ಅವರು ತಾರೀಖು 26.10.91 ರಂದು ಬೆಂಗಳೂರಿನಲ್ಲಿ ನಿಧನರಾದರು.

ಖ್ಯಾತ ನ್ಯಾಯವಾದಿಗಳಾಗಿದ್ದ ಶ್ರೀ ಸೋಮನಾಥ್ ಅಯ್ಯರ್ ಅವರು ಉಚ್ಚ ನ್ಯಾಯಾಲಯದಲ್ಲಿ ನ್ಯಾಯ ಮೂರ್ತಿಯಾಗಿ ಅನಂತರ ಮುಖ್ಯ ನ್ಯಾಯಾಧೀಶರಾಗಿ, 1969ರ ಅಂತ್ಯದಲ್ಲಿ ನಮ್ಮ ರಾಜ್ಯದ ಹಂಗಾಮಿ ರಾಜ್ಯಪಾಲರಾಗಿ ಗಣನೀಯವಾದ ಸೇವೆಯನ್ನು ಸಲ್ಲಿಸಿದ್ದರು. ಹಾಗೆಯೇ ಮಂಗಳೂರು. ದಕ್ಷಿಣ ಕನ್ನಡ ಜಿಲ್ಲೆಯ ಕಾಪು ಸಂಜೀವ ಶೆಟ್ಟಿ ಅವರು 1978ರಿಂದ 1983ರವರೆಗೆ ಈ ಸಭೆಯ ಮಾನ್ಯ ಸದಸ್ಯರಾಗಿ ದೀನ ದಲಿತರ ಸೇವೆಗಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದರು.

ಶ್ರೀಯುತ ಕೆ. ಲಕ್ಕಪ್ಪನವರು ಇಂದು ನಮ್ಮೊಡನೆ ಇಲ್ಲ. ಅವರದು ರಾಜಕೀಯ ಹೋರಾಟದ ಜೀವನ. ತಮಗೆ ಸರಿತೋರಿದ ವಿಚಾರಗಳ ಬಗ್ಗೆ ಯಾವ ದಾಕ್ಷಿಣ್ಯವೂ ಇಲ್ಲದೇ ನಿಷ್ಠೂರವಾಗಿ ವಾದ ಮಾಡತಕ್ಕ ಒಂದು ಧ್ವನಿಯನ್ನು ನಮ್ಮ ರಾಜ್ಯ ಇವತ್ತು ಕಳೆದುಕೊಂಡಿದೆ ಎಂದು ನಾನು ಭಾವಿಸುತ್ತೇನೆ. ಅವರ ಕಂಚಿನ ಕಂಠ ಲೋಕಸಭೆಯಲ್ಲಿ ತನ್ನದೇ ಆದಂತಹ ಪ್ರತಿಧ್ವನಿಯನ್ನು ಬಿಟ್ಟು ಹೋಗಿದೆ ಎಂದು ಅವರ ಜೊತೆಯಲ್ಲಿ ಕೆಲಸ ಮಾಡಿದ ನಾವೆಲ್ಲರೂ ಕೂಡ ಅನುಭವದಿಂದ ಹೇಳಬಹುದಾದ ವಿಚಾರ. ಹುಟ್ಟು ಚಳುವಳಿಗಾರರು ಮತ್ತು ಅವರು ಈ ಒಂದು ರಾಜಕೀಯ ಕ್ಷೇತ್ರದಲ್ಲಿ ಬಹಳ ದೊಡ್ಡ ಶೂನ್ಯವನ್ನು ಬಿಟ್ಟು ಹೋಗಿದ್ದಾರೆ ಎಂದು

ನಾನು ಭಾವನೆ ಮಾಡುತ್ತೇನೆ ಅವರು ನನ್ನ ಜೊತೆಯಲ್ಲಿ ಕಾಲೇಜಿನಲ್ಲಿ ಸಹಪಾಠಿಗಳಾಗಿದ್ದರು. ಇಬ್ಬರೂ ಒಟ್ಟಿಗೆ 1962ನೇ ಇಸವಿಯಲ್ಲಿ ವಿಧಾನ ಸಭೆಗೆ ಬಂದು ಪ್ರಜಾ ಸಮಾಜವಾದಿ ಪಕ್ಷದ ಚೌಕಟ್ಟಿನಲ್ಲಿ ಕೆಲಸ ಮಾಡಿ. ಆನಂತರ ವಿಧಿ ಇಬ್ಬರನ್ನೂ ಲೋಕಸಭೆಗೆ ಕರೆದುಕೊಂಡು ಹೋಯಿತು. ಪುನಃ ಇಬ್ಬರನ್ನೂ ವಿಧಿ. ವಿಧಾನಸಭೆಗೆ ಕರೆದುಕೊಂಡು ಬಂತು. ಇದು ಒಂದು ಕಾಕತಾಳ ನ್ಯಾಯ ಎಂದು ನಾನು ಹೇಳುತ್ತೇನೆ.

ನನಗೆ ಇನ್ನೂ ಒಂದು ವಿಷಯ ಜ್ಞಾಪಕ ಇದೆ. ಶ್ರೀ ಬಾಳಿಗಾ ಅವರು ಆಗ ಅಧ್ಯಕ್ಷರಾಗಿದ್ದರು. 1967ನೇ ಇಸವಿಯ ವಿಧಾನ ಸಭೆಯ ಕೊನೆಯ ಅಧಿವೇಶನ ಚುನಾವಣೆಗಳು ವಿರ್ಪಾಡಾಗಿತ್ತು. ಪ್ರಶ್ನೋತ್ತರ ಕಾಲ ಮುಗಿದಿತ್ತು. ಶ್ರೀ ಬಾಳಿಗರು ಪ್ರಶ್ನೋತ್ತರ ಕಾಲ ಮುಗಿಯಿತು ಎಂದು ಹೇಳಿದರು. ಲಕ್ಕಪ್ಪನವರ ಒಂದು ಪ್ರಶ್ನೆ ಉಳಿದಿತ್ತು. ಲಕ್ಕಪ್ಪನವರು ಅವರ ಸ್ಥಳದಲ್ಲೇ ನಿಂತು ಅಧ್ಯಕ್ಷರೇ, ನನ್ನದು ಕೊನೆಯ ಪ್ರಶ್ನೆ ಎಂದು ಕೇಳಿದರು. ಅದಕ್ಕೆ ಬಾಳಿಗರು ಅವರ ಕಡೆ ನೋಡಿ ಪ್ರಶ್ನೋತ್ತರ ಕಾಲ ಮುಗಿದಿದೆ ಎಂದು ಹೇಳಿದರು. ಆಗ ಅವರು ಹೇಳಿದ ಒಂದು ಮಾತು ಆಗಲೇ ಅವರು ಲೋಕಸಭೆಗೆ ಸ್ಪರ್ಧೆ ಮಾಡುತ್ತೇನೆ ಎಂದು ತೀರ್ಮಾನಕ್ಕೆ ಬಂದಿದ್ದರು.ಹಾಗಾದರೆ ನನ್ನ ಪ್ರಶ್ನೆಯನ್ನು ಲೋಕಸಭೆಯಲ್ಲೇ ಕೇಳುತ್ತೇನೆ ಎಂದು ಬಾಳಿಗರಿಗೆ ಹೇಳಿ. ಆ ಮಾತನ್ನು ಅವರು ಉಳಿಸಿಕೊಂಡರು. ಲೋಕಸಭೆಯಲ್ಲಿ ಬೇಕಾದಷ್ಟು ಪ್ರಶ್ನೆಗಳನ್ನು ಕೇಳಿದರು. ಶ್ರೀ ಲಕ್ಕಪ್ಪನವರ ನಿಧನದಿಂದ ನಮಗೆಲ್ಲರಿಗೂ ದುಃಖವುಂಟಾಗಿದೆ. ನೋವು ಉಂಟಾಗಿದೆ. ಈ ಎಲ್ಲರ ಆತ್ಮಗಳಿಗೆ ಶಾಂತಿ ದೊರಕಲಿ. ಅವರ ಕುಟುಂಬದವರಿಗೆ ನಮ್ಮ ಸಾಂತ್ವನವನ್ನು ಹೇಳತಕ್ಕಂಥ ಈ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ಅತ್ಯಂತ ನೋವಿನ ಮಡುವಿನಲ್ಲಿ ನಾವೆಲ್ಲಾ ಇದ್ದೇವೆ. ಶ್ರೀಮಾನ್ ಲಕ್ಕಪ್ಪನವರ ನಿಧನ ಆಕಾಲಿಕ ಅಷ್ಟೇ ಅಲ್ಲ, ಅದು ಒಂದು ಭಾರಿ ನಷ್ಟವೂ ಕೂಡ ಹೌದು. ಸ್ನೇಹಕ್ಕೆ ಹೆಸರಾಗಿರತಕ್ಕಂಥ ವ್ಯಕ್ತಿ ಲಕ್ಕಪ್ಪನವರಾಗಿದ್ದರು. ನಾನು ಅವರನ್ನು, ನಿಮ್ಮನ್ನು ನೋಡಿದ ನೆನಪು ಈಗಲೂ ಕೂಡಾ ಇದೆ. ಅವರು ತಮ್ಮ ಸಹಪಾಠಿಗಳಾಗಿ, ಸಹ ಸದಸ್ಯರಾಗಿ ಇಲ್ಲಿ ಮತ್ತು ಪಾರ್ಲಿಮೆಂಟ್‌ನಲ್ಲಿ ಕೆಲಸ ಮಾಡಿದ್ದೀರಿ ತಮ್ಮ ಅನುಭವ ದೊಡ್ಡದು ನಮ್ಮ ಅನುಭವನೇ ಬೇರೆ, ಅದು ಬಹಳ ಚಿಕ್ಕದು ನಾನು ಬಂದು ಮೇಲುಗಡೆಯಲ್ಲಿ ಮೂಲೆಯಲ್ಲಿ ಕುಳಿತುಕೊಂಡಿದ್ದೇ ಆಗ ನಾನು ಮೊದಲನೇ ಸಾರಿ ಈ ಸಭೆಯನ್ನು ನೋಡುವುದಕ್ಕೋಸ್ಕರ ಬಂದಿದ್ದೆ. ಆ ಸಂದರ್ಭದಲ್ಲಿ ತಾವು ಅಲ್ಲಿ ಕುಳಿತುಕೊಂಡಿದ್ದಿರಿ. ನನಗೆ ಇನ್ನೂ ನೆನಪು. ಪಿ.ಎಸ್.ಪಿ.ಯಿಂದ ತಾವು ಆಯ್ಕೆಯಾಗಿದ್ದೀರಿ ಲಕ್ಕಪ್ಪನವರೂ ಕೂಡಾ ಇದ್ದರು. ಆ ಕಾಲದಲ್ಲಿ ಪ್ರಶ್ನೆ ಉತ್ತರ ಎಲ್ಲಾ ಪತ್ರಿಕೆಯಲ್ಲಿ ಬರುತ್ತಿತ್ತು. ಈಗ ಅದು ನಿಂತು ಹೋಗಿದೆ. ಪತ್ರಿಕೆಗಳಲ್ಲಿ ತಮ್ಮ ಹೆಸರು ಶ್ರೀ ಲಕ್ಕಪ್ಪನವರ ಹೆಸರು ಬರುತ್ತಿತ್ತು. 1962 ಅವರು ಯುವಕರಾಗಿದ್ದಾಗ ಬಂದಂಥ ಕಾಲ ಅದನ್ನೆಲ್ಲಾ ನಾನು ನೆನಸಿಕೊಂಡಾಗ ವಿರೋಧ ಪಕ್ಷದಲ್ಲಿ ಕುಳಿತು ಯಾವ ರೀತಿಯಾಗಿ ಕೆಲಸ ಮಾಡಬೇಕು. ಎನ್ನತಕ್ಕಂಥ ವಿಚಾರ ನಾವು ಗಮನಿಸತಕ್ಕಂಥ ಕಾಲ. ನಾನು ಒಬ್ಬ ವೀಕ್ಷಕನಾಗಿ ತಮ್ಮ ಕಾರ್ಯಕಲಾಪವನ್ನು ನೋಡಿದ್ದು ನನಗೆ ಇನ್ನು ಕೂಡ ನೆನಪಿನಲ್ಲಿದೆ. ಅದೇ ರೀತಿಯಾಗಿ ಬೇರೆ ಅತ್ಯಂತ ಹಿರಿಯ ಸದಸ್ಯರು ಕೂಡ ತಮ್ಮ ಜೊತೆಯಲ್ಲಿದ್ದರು. ಅನಂತರ ಲಕ್ಕಪ್ಪನವರು ನಮಗೆ ಇಲ್ಲಿ ಸಿಗಲಿಲ್ಲ ತಾವು ಹೇಳಿದ ಹಾಗೆ ಪಾರ್ಲಿಮೆಂಟ್‌ಗೆ ಹೊರಟು ಹೋದರು.

ತಾವು ಹೇಳಿದ ಹಾಗೆ ಪಾರ್ಲಿಮೆಂಟ್‌ನಲ್ಲಿ ಅವರು ಕಂಚಿನ ಕಂಠ ತನ್ನದೇ ಆಗಿರತಕ್ಕಂಥ ವಿಶಿಷ್ಟ ಸ್ಥಾನವನ್ನು ಪಡೆದಿತ್ತು. ಆ ಸ್ಥಾನವನ್ನು ಎಂದೂ ಕೂಡ ಬಿಟ್ಟುಕೊಡಲಿಲ್ಲ. ಕೊನೆಯವರೆಗೂ ರಾಜ್ಯದ ಹಿತ, ರಾಷ್ಟ್ರದ ಹಿತದ ಬಗ್ಗೆ ಹೋರಾಟವನ್ನು ಮಾಡಿತು. ಕೊನೆಗೆ ತಾವು ಹೇಳಿದ ಹಾಗೆ ವಿಧಿ ಅವರನ್ನು ಇಲ್ಲಿ ತಂದಿತು. ಇಲ್ಲಿ ನಾವು ಭಾಗ್ಯ ಪಡೆದಿದ್ದೇವೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಸಂಸದೀಯ ವ್ಯವಹಾರಗಳಲ್ಲಿ ಅಪಾರ ಪಾಂಡಿತ್ಯ ಇರತಕ್ಕಂಥವರು ಅನುಭವ ಇರತಕ್ಕಂಥವರು ಈ ಸದನಕ್ಕೆ ನಿಜವಾಗಲೂ ಬಹಳ ದೊಡ್ಡ ಕೊಡುಗೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅದು ಒಂದು ಶೋಚಿ ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂಥವರು ಕಲಿಯುವುದಕ್ಕಂತೂ ಅಪರೂಪ ಸಂದರ್ಭಗಳು ಅದನ್ನು ಸಮುಪಯೋಗಪಡಿಸಿಕೊಳ್ಳಬೇಕು. ತಾವು ಅಧ್ಯಕ್ಷರಾಗಿ ಕುಳಿತಿರಿ. ಲಕ್ಕಪ್ಪನವರು ಅಲ್ಲಿ ಕುಳಿತು ಕೆಲಸ ಮಾಡುತ್ತಿರತಕ್ಕಂಥದ್ದನ್ನು ನೋಡಿದ್ದೇವೆ ಅದನ್ನೆ ಇವತ್ತು ಅಲ್ಲಿ ನೋಡಿದಾಗ ಅವರು ಇಲ್ಲ. ಶ್ರೀಮಾನ್ ಲಕ್ಕಪ್ಪನವರ ಆರೋಗ್ಯ ಅಷ್ಟೊಂದು ಸರಿ ಇರಲಿಲ್ಲ. ಅವರು ದೈಹಿಕವಾಗಿ ಬಹಳ ಕ್ಷೀಣವಾಗಿದ್ದರು. ಹಿಂದೆ ಸ್ವಲ್ಪ ದಪ್ಪ ಆಗಿ ಬಹಳ ಜೋರಾಗಿ ಓಡಾಡತಕ್ಕಂಥ ವ್ಯಕ್ತಿ ಕುಳ್ಳಗೆ ಮತ್ತೆ ದಪ್ಪವಾಗಿದ್ದರು. ಆದರೆ ಇತ್ತೀಚೆಗೆ ಅವರ ದೇಹದಾಡ್ಯ ಅಷ್ಟೊಂದು ಇರಲಿಲ್ಲ. ಬಹಳ ಕ್ಷೀಣಿಸಿಬಿಟ್ಟಿತ್ತು. ಆದರೆ ಪ್ರಶ್ನೆಯನ್ನು ಕೇಳಬೇಕಾದರೂ ಕೂಡ ತಮ್ಮ ಅನುಮತಿಯನ್ನು ಪಡೆಯತಕ್ಕಂಥ ಸಂದರ್ಭದಲ್ಲಿ ಯಾವುದೇ ಸಂದರ್ಭವನ್ನೂ ಅವರು ಬಿಟ್ಟುಕೊಟ್ಟವರಲ್ಲ ಅವರು ಕೊನೆಯವರೆಗೂ ಕೂಡ ಅಲ್ಲಿ ಕುಳಿತು ಪ್ರಾಮಾಣಿಕ ಪ್ರಯತ್ನವನ್ನು ಮಾಡಿರತಕ್ಕಂಥ ಒಂದು ಚಿತ್ರ ಇವತ್ತು ನಮ್ಮೆಲ್ಲರ ಮನಸ್ಸಿನಲ್ಲಿ ಅಚ್ಚಳಿಯದೆ ಹಾಗೆ ಉಳಿದಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಬೇಕಾಗಿದೆ.

ತಾವು ಶ್ರೀಮಾನ್ ಲಕ್ಕಪ್ಪನವರನ್ನು ಕುಳಿತುಕೊಳ್ಳಿ, ಅಂದಾಗ ತಮಗೆ ಗೌರವವನ್ನು ಕೊಟ್ಟು ತಕ್ಷಣ ಕುಳಿತುಕೊಂಡಿರುವುದನ್ನು ನೋಡಿ ನಾವು ಎಷ್ಟೋ ಸಾರಿ ಮಾತನಾಡಿದ್ದೇವೆ. ಸಂಸದೀಯ ವ್ಯವಹಾರದಲ್ಲಿ ಹಾಗೆ ಹೇಳಿದ ತಕ್ಷಣ ಚಕ್ ಅಂತ ಕುಳಿತುಕೊಳ್ಳತಕ್ಕ ಪದ್ಧತಿ ಇದೆಯಲ್ಲ ಅದು ಅನುಭವದ ಮಾತು ಅನ್ನತಕ್ಕದ್ದು. ಅವರು ಬಹಳ ಹಗುರವಾಗಿ ಮಾತನಾಡತಕ್ಕ ವ್ಯಕ್ತಿ ಆಗಿರಲಿಲ್ಲ. ಬಹಳ ತೂಕವಾಗಿ ಮಾತನಾಡುತ್ತಿದ್ದರು. ವಿಷಯದ ಗಹನತೆಯನ್ನು ಅನುಸರಿಸಿ ಮಾತನಾಡತಕ್ಕ ವಿಚಾರವು ಕೂಡ ಮನಮೋಹಕವಾಗಿತ್ತು. ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸದನದ ಗಮನಕ್ಕೆ ತರುತ್ತಿದ್ದೇನೆ. ಅವರು ಇತ್ತೀಚೆಗೆ ಕಾಯಿಲೆ ಬಿದ್ದು ಖಾಸಗಿ ನರ್ಸಿಂಗ್ ಹೋಂನಲ್ಲಿದ್ದರು. ವಿಷಯ ಗೊತ್ತಾದ ತಕ್ಷಣ ನಾನು ಮತ್ತು ನಮ್ಮ ಮಿತ್ರರು ಅವರನ್ನು ಮಾತನಾಡಿಸಿಕೊಂಡು ಬರುವುದಕ್ಕೆ ಹೋಗಿದ್ದೇವು. ಅವರಿಗೆ ಅರ್ನಿಯಾ ಆಪರೇಷನ್ ಇತ್ಯಾದಿ ಆಗಿತ್ತೆಂದು ಹೇಳಿದರು. ಬೆಂಗಳೂರು ನರ್ಸಿಂಗ್ ಹೋಂಗೆ ಹೋಗಿ ಚಿಕಿತ್ಸೆ ಪಡೆದು ಅವರು ಚೆನ್ನಾಗಿ ಗುಣಮುಖರಾಗಿ ಬಂದರು.

ಮೊನ್ನೆ ನಾವು ಚುನಾವಣೆಯ ಸಂದರ್ಭದಲ್ಲಿ ಧಾರವಾಡ, ಆ ಕಡೆ ಇದ್ದಾಗ, ಒಂದೇ ಸಾರಿ ದಿಗ್ಭ್ರಾಂತರಾಗತಕ್ಕ, ದಿಗ್ಭ್ರಮೆ ಉಂಟು ಮಾಡತಕ್ಕ ಒಂದು ಸಮಾಚಾರವನ್ನು ನಾನು ಅಲ್ಲಿ ಪಡೆದೆ, ತಾವೂ ಬೇರೆ ಬೇರೆ ಭಾಗದಲ್ಲಿದ್ದಾಗ ಪಡೆದಿರಿ ಅತ್ಯಂತ ಹಿರಿಯ ಅನುಭವಸ್ಥ, ಸಂಸದೀಯ ಪಟುವನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಎನ್ನತಕ್ಕ ಮಾತನ್ನು ಮತ್ತೊಮ್ಮೆ ಹೇಳತಕ್ಕ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತಿಲ್ಲ. ಇಂತಹ ಲಕ್ಕಪ್ಪನವರು ಇವತ್ತು ಇದ್ದು, ಇನ್ನೂ ಹಲವು ಕಾಲ ನಮ್ಮ ಜೊತೆಗೆ ಇದ್ದು ಅವರ ಕೊಡುಗೆಯನ್ನು ಕೊಡಬೇಕಾಗಿತ್ತೆನ್ನುವುದು ನಮ್ಮೆಲ್ಲರ ಆಸೆ. ಆದರೆ ವಿಧಿ ಯಾವ ಸಂದರ್ಭದಲ್ಲಿ ಯಾರಿಗೆ ಏನು ಮಾಡುತ್ತದೆಂದು

ಹೇಳುವುದಕ್ಕಾಗುವುದಿಲ್ಲ. ಅವರು ಇವತ್ತು ನಮ್ಮನ್ನು ಆಗಲಿ ಹೋಗಿದ್ದಾರೆ. ಅವರ ಸ್ನೇಹಪರ ಜೀವನ ಏನಿತ್ತು ಅದರ ಬಗ್ಗೆ ಅವರ ಜೊತೆಯಲ್ಲಿದಂತಹ ಸ್ನೇಹಿತರು ಮತ್ತು ನಾವು ಮೊನ್ನೆ ಮೊನ್ನೆ ಸೇರಿದಾಗ ಕೂಡ ಮಾತನಾಡುತ್ತಿದ್ದೆವು. ಸ್ನೇಹಕ್ಕೆ ಅವರು ಎತ್ತಿದ ಕೈ ಅಂತಹವರ ಆಗಲಿಕೆ ನಮಗೆ ಬಹಳ ನೋವನ್ನು ತಂದಿದೆ.

ನಮಗೆ ಹೀಗಿದ್ದಾಗ ಅವರ ಕುಟುಂಬದವರಿಗೆ ಇನ್ನೆಷ್ಟು ನೋವಾಗಿರುವುದಿಲ್ಲ. ಮೊನ್ನೆ ತಾನೇ ಅವರ ಮಗ ಮತ್ತು ಅವರ ಸ್ನೇಹಿತರು ಬಂದು ನನ್ನನ್ನು ಕಂಡು ಹೋಗಿದ್ದರು. ಆ ಸಂದರ್ಭದಲ್ಲಿ ಅದನ್ನು ನೆನಪಿಸಿಕೊಂಡಾಗ ಅವರ ಕುಟುಂಬದವರಿಗೆ ಅದೊಂದು ವೈಯಕ್ತಿಕ ನಷ್ಟ ಆಗಿದೆ. ಈ ಸಂದರ್ಭದಲ್ಲಿ ಮಾನ್ಯ ಸಭಾದ್ಯಕ್ಷರು ಹೇಳಿದ ಹಾಗೆ ಇದು ಬಹಳ ದೊಡ್ಡ ನಷ್ಟ, ಅತ್ಯಂತ ನೋವಿನ ವಿಚಾರ ಅದರಲ್ಲಿ ಇಡೀ ಸದನವೇ ಭಾಗಿಯಾಗುತ್ತದೆ. ಎನ್ನತಕ್ಕ ಮಾತನ್ನು ಹೇಳುತ್ತೇನೆ. ಆದರೆ ಸಂಸದೀಯ ವ್ಯವಹಾರದಲ್ಲಿ ಅವರ ಮಾರ್ಗದರ್ಶನ ಏನಿದೆ ಅದನ್ನು ನಾವು ಅನುಸರಿಸಿ ಕೊಂಡು ಹೋಗತಕ್ಕ ವಿಚಾರದಲ್ಲಿ ನಾವು ಗಮನಪರಿಸಬೇಕು. ಎನ್ನತಕ್ಕ ಮಾತನ್ನು ಮತ್ತೊಮ್ಮೆ ಹೇಳಿ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, ಅವರ ಕುಟುಂಬ ವರ್ಗದವರಿಗೆ ಬಾರೀ ನಷ್ಟ ಏನಾಗಿದೆ. ಇದನ್ನು ತೆಗೆದುಕೊಳ್ಳತಕ್ಕ ಶಕ್ತಿ ಬರಲಿ, ದೇವರು ಅವರಿಗೆ ಆ ಶಕ್ತಿಯನ್ನು ಕೊಡಲಿ ಎನ್ನುವಂತಹ ಮಾತನ್ನು ಹೇಳುತ್ತೇನೆ. ಶ್ರೀ ಎಂ. ಶ್ರೀನಿವಾಸ ನಾಯಕ್ ಅವರು ನನಗೆ ಅಷ್ಟೊಂದು ನಿಕಟವಾಗಿದ್ದಂತಹವರಲ್ಲ. ವಿಕೆಂದರೆ, ವಯಸ್ಸಿನ ವ್ಯತ್ಯಾಸದಿಂದ ನಿಕಟವಾಗಿದ್ದಂತಹವರಲ್ಲ. ಆಮೇಲೆ ಶ್ರೀ ಎನ್.ಪೆಚ್. ಗೌಡರವರು ನಿಧನರಾಗಿದ್ದಾರೆ. ಶ್ರೀ ಎಂ.ಎಸ್. ಮಹಂತ್ ದೇವರು ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರ ತಂದೆಯವರು ಎಂದು ನನಗೆ ಗೊತ್ತಿರಲಿಲ್ಲ. ಈಗ ತಾನೇ ತಾವು ಹೇಳಿದ ಮೇಲೆ ಪ್ರೊ. ನಂಜುಂಡಸ್ವಾಮಿಯವರ ತಂದೆಯವರು ಅವರು ಎಂದು ಗೊತ್ತಾಯಿತು. ಆದರೆ ಅವರ ಹೆಸರನ್ನು ಕೇಳಿದ್ದೆವು. ಆದರೆ ನಿಧನರಾದವರು ಪ್ರೊ. ನಂಜುಂಡಸ್ವಾಮಿಯವರ ತಂದೆಯವರು ಎನ್ನತಕ್ಕ ವಿಚಾರ ಗೊತ್ತಿರಲಿಲ್ಲ. ಅದೇ ರೀತಿ ಶ್ರೀಮಾನ್ ಹಲಸನಾಡು ಸುಬ್ಬರಾವ್‌ರವರು, ಎಂ.ಆರ್. ಸೋಮನಾಥ್ ಐಯ್ಯರ್, ಅವರು ನಮ್ಮ ಗೌರ್ನರ್ ಆಗಿದ್ದವರು. ಅವರ ಜೊತೆಯಲ್ಲಿ ಸಂಸದೀಯ ವ್ಯವಹಾರದಲ್ಲಿ ನಾವು ಇರತಕ್ಕ ಅವಕಾಶ ಅಷ್ಟೊಂದು ನಮಗೆ ಸಿಗಲಿಲ್ಲ. ಅದನ್ನು ನಾವು ಕೇಳಿ ತಿಳಿದುಕೊಂಡಿದ್ದೇವೆ. ಅವರೆಲ್ಲರೂ ಕೂಡಾ ರಾಜ್ಯದ ಹಿತದೃಷ್ಟಿಯ ಬಗ್ಗೆ ಹೆಚ್ಚಿನ ಗಮನಪರಿಸಿದ್ದರು. ಇವರುಗಳು ನಿಧನರಾಗಿರುವುದು ಕೂಡ ದೊಡ್ಡ ನಷ್ಟವಾಗಿದೆ. ಶ್ರೀಮಾನ್ ಟಿ.ವಿ. ಚಂದ್ರಶೇಖರಪ್ಪನವರು ನಮ್ಮ ಜಿಲ್ಲೆಯವರೇ, ಚಿನ್ನಗಿರಿ ತಾಲ್ಲೂಕಿನವರು. ಅವರು 1971ರಲ್ಲಿ ಪಾರ್ಲಿಮೆಂಟಿಗೆ ಆಯ್ಕೆಯಾಗಿ ಹೋದಂತಹವರು ಅನಂತರ ಅನೇಕ, ಬಾರಿ ಆಯ್ಕೆಯಾಗಿ ಹಲವಾರು ವರ್ಷಗಳವರೆಗೆ ಜಿಲ್ಲೆ, ಕ್ಷೇತ್ರ ಅಷ್ಟೇ ಅಲ್ಲ, ರಾಜ್ಯದಲ್ಲಿಯೂ ಕೂಡ ಸೇವೆಯನ್ನು ಸಲ್ಲಿಸಿದ್ದಾರೆ. ಪಾರ್ಲಿಮೆಂಟ್ ಸದಸ್ಯರಾಗಿ ರಾಷ್ಟ್ರದಲ್ಲೂ ಕೂಡ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಅಗಲಿಕೆಯಿಂದ ನಮ್ಮ ಜಿಲ್ಲೆಗೆ, ನಮ್ಮ ರಾಜ್ಯಕ್ಕೆ ನಮ್ಮ ರಾಷ್ಟ್ರಕ್ಕೆ ದೊಡ್ಡ ನಷ್ಟವಾಗಿದೆ. ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀಮಾನ್ ಕೆ. ಲಕ್ಕಪ್ಪನವರು ವೀರೇಂದ್ರಪಾಟೀಲರು ಮೊದಲನೆ ಸಲ ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ಅವರು ಪಿ.ಡಬ್ಲ್ಯೂ.ಡಿ ಸಚಿವರಾಗಿದ್ದರು. ಎನ್ನುವುದು ನನಗೆ ನೆನಪು ಇದೆ. ಅವರು ಬಹಳ ಮಿತಭಾಷಿಯಾಗಿದ್ದರು. ಇತ್ತೀಚಿನ ವರ್ಷಗಳಲ್ಲಿ ಅವರು ಯಾವುದಕ್ಕೂ ಕೂಡ ಹೋಗುತ್ತಿರಲಿಲ್ಲ. ಅವರು ಪಿ.ಡಬ್ಲ್ಯೂ.ಡಿ. ಸಚಿವರಾಗಿದ್ದಂತಹ ಕಾಲದಲ್ಲಿ 1967 ಆದಮೇಲೆ ನಾವು ಅಲ್ಲಿ ಮೂಲೆಯಲ್ಲಿ ಕುಳಿತುಕೊಳ್ಳುತ್ತಿದ್ದೇವು ನನಗೆ ಈಗಲೂ

ಕೂಡ ಆ ನೆನಪು ಇದೆ. ಅವರು ಪ್ರಶ್ನೆಗೆ ಬಹಳ ಚೆನ್ನಾಗಿ, ಚಿಕ್ಕದಾಗಿ, ಚೊಕ್ಕದಾಗಿ ಉತ್ತರ ಕೊಡುವಂತಹ ಪಟುವಾಗಿದ್ದರು.

ಅವರ ನಿಧನವೂ ಕೂಡ ಈ ಒಂದು ರಾಜ್ಯಕ್ಕೆ ದೊಡ್ಡ ನಷ್ಟ ಎನ್ನುವ ಮಾತನ್ನು ಹೇಳಿತ್ತೇನೆ. ನಂತರ ಶ್ರೀಮಾನ್ ಬಿ.ಎ. ಉಮರಬ್ಬನವರು ಅವರದು ಎಂಥ ಕನ್ನಡ ಸಾಹಿತ್ಯ ಎಂದರೆ ಅವರು ಕನ್ನಡ ಭಾಷೆಯನ್ನು ಸುಲಲಿತವಾಗಿ, ಎಷ್ಟೊಂದು ನೀಟಾಗಿ, ಬೇರೆ ಭಾಷೆಯ ಯಾವುದೇ ಒಂದು ಪದವನ್ನು ಪ್ರಯೋಗ ಮಾಡದೇ ಅಚ್ಚ ಕನ್ನಡದಲ್ಲಿ ಸ್ವಚ್ಛವಾಗಿ ಮಾತನಾಡುವಂತಹವರಲ್ಲಿ ಎತ್ತಿದ ಕೈ ಶ್ರೀಮಾನ್ ಬಿ.ಎ. ಉಮರಬ್ಬನವರದ್ದು, ನಾವು ವಿರೋಧ ಪಕ್ಷದಲ್ಲಿದ್ದಾಗ, ಉಮರಬ್ಬರವರು ಮಾತನಾಡುವಾಗ ನೀವು ಇನ್ನೂ ಸ್ವಲ್ಪ ಮಾತನಾಡಿ ಮಾತನಾಡಿ ಎಂದು ಎಷ್ಟೋ ಸಲ ಹೇಳಿದಂಥ ಸಂದರ್ಭಗಳುಂಟು ನಾನು ಮೊನ್ನೆ ದೆಹಲಿಗೆ ಹೋಗುವ 2-3 ದಿವಸ ಮುಂಚೆ ಅವರೂ, ಅವರ ಮನೆಯವರು ಒಂದು ಮಗುವಿನ ಜೊತೆಯಲ್ಲಿ ನಮ್ಮ ಮನೆಗೆ ಬಂದಿದ್ದರು. ನಾನು ಏನು ಸಮಾಚಾರ ಉಮರಬ್ಬರವರೇ ಬಂದಿರಿ ಎಂದು ಕೇಳಿದೆ. ಅದಕ್ಕೆ ಅವರು ಸುಮ್ಮನೆ ಬರಬೇಕೆಂದು ಮನಸ್ಸಾಯಿತು. ಅದಕ್ಕೆ ಬಂದೆ ಎಂದು ನಮಸ್ಕಾರ ಮಾಡಿ ಹೊರಟು ಹೋದರು. ಅವರ ಮನೆಯವರು ನಮ್ಮ ಸಾಗರದವರು ಎಸ್.ಎಸ್. ಕುಮುಟಾ ಎಂದು, ಸಮಾಜವಾದಿ ಹೋರಾಟಗಾರರು. ಅವರ ಮಗಳು ಅವರು ಮತ್ತು ಪದ್ಮ ಕುಮುಟಾರವರ ಸಿಸ್ಟರ್ ಅವರು ಅವರ ಜೊತೆಯಲ್ಲಿ ಕೂಡ ಬಂದಿದ್ದರು. ಅವರು ಬೆಂಗಳೂರಿನಲ್ಲಿಯೇ ಜೀವನೋಪಾಯಕ್ಕೋಸ್ಕರ ಕೆಲಸ ಮಾಡುತ್ತಿದ್ದಾರೆ.

ಶ್ರೀ ಉಮರಬ್ಬರವರ ನಿಧನದಿಂದ ವೈಯಕ್ತಿಕವಾಗಿ ಬಹಳ ದೊಡ್ಡ ನಷ್ಟವಾಗಿದೆ. ಇದರಲ್ಲಿ ಅನುಮಾನ ಬೇಕಾಗಿಲ್ಲ. ನನಗೆ ಗೊತ್ತಿದೆ. ಅವರ ಮನೆಯವರ ಆರ್ಥಿಕ ಪರಿಸ್ಥಿತಿ - ಕೂಡ ಬಹಳ ತೊಂದರೆಯಲ್ಲಿದೆ. ಇವರ ನಿಧನದಿಂದ ಸಂಸದೀಯ ವ್ಯವಹಾರದಲ್ಲಿ ಮಾತ್ರವಲ್ಲದೇ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ, ಕನ್ನಡಕ್ಕೆ ಕರ್ನಾಟಕಕ್ಕೆ ಮತ್ತು ಶಾಸನ ಸಬೆಗೆ ಕೂಡ ಬಹಳ ದೊಡ್ಡ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಕುಟುಂಬ ವರ್ಗದವರಿಗೆ ಇವರ ನಿಧನದಿಂದ ಉಂಟಾದ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ಕೊಡಲಿ. ಇನ್ನು ಶ್ರೀಮಾನ್ ಪೆಚ್. ಸಿ. ಲಿಂಗಾರೆಡ್ಡಿಯವರು ಫಿಶರೀಸ್ ಅಂಡ್ ಕಮ್ಯೂನಿಟಿ ಡೆವೆಲಪ್ ಮೆಂಟ್ ಅಥವಾ ರೂರಲ್ ಡೆವೆಲಪ್‌ಮೆಂಟ್ ಸಚಿವರು ಕೂಡ ಆಗಿದ್ದರು. ಅವರು ಗಾಂಧಿಯನ್ ಸ್ಪೈಲ್ ಆಫ್ ಲೀವಿಂಗ್‌ನಲ್ಲಿ ಬಂದಂಥವರು. ಅವರು ಕೋಲಾರ ಡಿಸ್ಟ್ರಿಕ್ಟ್‌ನ ಮಾಲೂರಿಗೆ ಸೇರಿದವರು. ಅವರು ಸದನದ ಸದಸ್ಯರಾಗಲಿ, ಬಿಡಲಿ ಸಮಾಜದಲ್ಲಿ ಒಳ್ಳೆಯ ಗೌರವವನ್ನು ಪಡೆದಂಥವರಾಗಿದ್ದರು. ಅವರ ನಿಧನ ದೊಡ್ಡ ನಷ್ಟ ಎಂಬುದನ್ನು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಇವರೆಲ್ಲರ ಬಗ್ಗೆ ತಾವು ಏನು ಪ್ರಸ್ತಾಪ ಮಾಡಿದ್ದೀರಿ, ಅವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಅನುಭವ ನಮಗೆ ಮಾರ್ಗದರ್ಶನವಾಗಲಿ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಇವರುಗಳ ನಿಧನದಿಂದ ಉಂಟಾದ ನಷ್ಟವನ್ನು ಅವರೆಲ್ಲರ ಕುಟುಂಬ ವರ್ಗದವರಿಗೆ ಭರಿಸುವಂತಹ ಸ್ಥಶಕ್ತಿ ದೇವರು ಅನುಗ್ರಹಿಸಲಿ ಎಂದು ಹೇಳಿ. ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದನಾಯಕರು) : ಮಾನ್ಯ ಅಧ್ಯಕ್ಷರೇ, ತಾವು ಮತ್ತು ಸಭಾ ನಾಯಕರು ಅಭಿವ್ಯಕ್ತ ಮಾಡಿದಂಥ ಸಂತಾಪ ಸೂಚಕ ನಿರ್ಣಯಕ್ಕೆ ನಾನೂ ನನ್ನ ಧ್ವನಿಗೂಡಿಸುತ್ತೇನೆ. ಸುಮಾರು 11 ಜನ ನಿಧನದ ಸುದ್ದಿಯನ್ನು ತಾವು ಈ ದಿವಸ ಪ್ರಸ್ತಾಪ ಮಾಡಿದ್ದೀರಿ. ಶ್ರೀಮಾನ್ ಲಕ್ಕಪ್ಪನವರನ್ನು

ನಾನು 60ರ ದಶಕದಿಂದಲೂ ಬರೀ ಬಲ್ಲವನಷ್ಟೇ ಅಲ್ಲ, ಅವರ ಜೊತೆ ಒಡನಾಡಿಯಾಗಿ ಕೆಲಸ ಮಾಡಿದವನು. ಸಮಾಜವಾದೀ ಪಕ್ಷದ ಸದಸ್ಯತ್ವವನ್ನು ನನಗೆ ಮೊದಲು ಕೊಟ್ಟವರು ಶ್ರೀಮಾನ್ ಲಕ್ಕಪ್ಪನವರು ನಾನು ಅವರಲ್ಲಿ ಕಂಡ ವಿಶೇಷ ಗುಣಗಳು ಎಂದರೆ, ಸ್ನೇಹ ಮತ್ತು ಕಾಮರೇಡರಿ ಇವೆರಡೂ ವ್ಯಕ್ತಿಗೆ ಸೀಮಿತವಾದಂಥ ಗುಣಗಳು. ಸ್ನೇಹ ಹೇಗಿತ್ತು. ಎಂದರೆ ದೆಹಲಿಯಲ್ಲಿ ನಾವು ಸಂಸತ್ ಸದಸ್ಯರಾಗಿದ್ದರೂ ಊಟ ಎಲ್ಲಿ ಎಂದರೆ ಲಕ್ಕಪ್ಪನವರ ಮನೆಯಲ್ಲೇ ಅವರಿಗೆ ಯಾವುದೇ ವಿಶೇಷವಾದ ಸಂದರ್ಭ ಬಂದರೂ ನಾವು ಅವರ ಜೊತೆಯಲ್ಲಿ ಹೋಗದಿದ್ದರೆ ಅವರಿಗೆ ಸಮಾಧಾನವಾಗುತ್ತಿರಲಿಲ್ಲ. ಮೇಲಾಗಿ ಸಂಸತ್ತಿನಲ್ಲಿ ಮೊದಲನೇ ಬಾರಿಗೆ ಈ ಮನುಷ್ಯ ಹಾಕಿದ ಗುಡುಗು ಎಂದರೆ How to catch the eye of the speaker. ಇದೊಂದು ತಂತ್ರಜ್ಞ ಪರಿಣತೆ. ಈ ಪರಿಣತೆಯಲ್ಲಿ ಶ್ರೀಮಾನ್ ಲಕ್ಕಪ್ಪನವರು ತುಂಬಾ ಪಳಗಿದ್ದರು ಮತ್ತು ಯಶಸ್ವಿಯಾಗಿದ್ದರು. ಒಂದೊಂದು ಸಾರಿ ನಾವು ಸಂಸತ್ತಿನಲ್ಲಿ ನೀವು ಏಕೆ ಇಷ್ಟೊಂದು ಗಲಾಟೆ ಮಾಡುತ್ತೀರಿ ಎಂದು ಅವರನ್ನು ಕೇಳಿದ್ದುಂಟು ಹಾಗೆ ಹೇಳಿದರೆ ನಮ್ಮ ಧ್ವನಿ ಸಂಸತ್ತಿನಲ್ಲಿ ಕೇಳಲೇ ಇಲ್ಲ. ಅವರದ್ದೇ ಕೇಳುತ್ತಿತ್ತು. ಇದೊಂದು ವಿಶೇಷವಾದಂಥ ಗುಣ.

ಅವರು ಯಾವುದೇ ಪಕ್ಷದಲ್ಲಿರಲಿ, ನಾವು ಯಾವುದೇ ಪಕ್ಷದಲ್ಲಿರಲಿ ಸ್ನೇಹಕ್ಕೆ ರಾಜಕೀಯವನ್ನು ಎಂದೂ ಬೆರೆಸಿದವರಲ್ಲ. ಅದು ಮಕ್ಕಳ ಮದುವೆಯಾಗಬಹುದು. ರಾಜಕೀಯ ಸಮಾರಂಭವಾಗಬಹುದು. ಇಲ್ಲವೇ ಸ್ನೇಹಕೂಡವಾಗಬಹುದು. ಎಲ್ಲಾ ಕಡೆಗೂ ತನ್ನ ಇರುವಿಕೆಯನ್ನು ಅಲ್ಲಿ ಇದ್ದಂಥ ಎಲ್ಲಾ ಜನರಿಗೆ ತಿಳಿಯುವ ಹಾಗೆ ನೆಡೆದುಕೊಳ್ಳುತ್ತಿದ್ದಂಥ ಒಂದು ಸ್ವಭಾವ ಅವರದು ಆದರೆ, ಶಾಸನ ಸಭೆಗೆ ಬಂದ ನಂತರ ಸಂಸತ್ತಿನಲ್ಲಿದ್ದಂಥ ಒಂದು ಫೈರ್ ಎಂದು ಏನು ಹೇಳುತ್ತೇವೆ. ಅದನ್ನು ಇಲ್ಲಿ ಕಾಣಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಅವರ ದೇಹಸ್ಥಿತಿ ಅಷ್ಟು ಚೆನ್ನಾಗಿರಲಿಲ್ಲ. ಅವರು ಸಾಯುವುದಕ್ಕೆ ಎರಡು ದಿವಸಗಳ ಮುಂಚೆ ನಿಮ್ಮನ್ನು ಸ್ವಲ್ಪ ನೋಡಬೇಕು. ಎಂದು ನಾನು ಒಂದು ಚೀಟಿಯನ್ನು ಬರೆದು ಕಳುಹಿಸಿದೆ. ಅವರು ಒಂದು ನಿಮಿಷವೂ ತಡ ಮಾಡದೆ ಬಂದರು. ಆಗ ನಾನು ಅವರಿಗೆ ಹೇಳಿದೆ. ನಿಮ್ಮ ಆರೋಗ್ಯ ಸರಿಯಾಗಿದ್ದಂತೆ ಕಾಣುತ್ತಿಲ್ಲ. ಈ ಸಾರ್ವಜನಿಕ ಜೀವನ ಸಾಕು, ಸ್ವಲ್ಪ ನಿಮ್ಮ ಬದುಕಿನ ಕಡೆಗೂ ಆಲೋಚನೆ ಮಾಡಿ, ನನಗೆ ಸಂಶಯ ಬಂದಿದೆ ಎಂಬ ಮಾತನ್ನು ಹೇಳಿದೆ. ಅನಂತರ ಈ ಮಾತನ್ನು ಏಕೆ ಆಡಿದೆಯೆಂದು ನನಗೆ ಅನ್ನಿಸಿತು. ಅವರು ಸಾಯುವುದಕ್ಕೆ ಒಂದು ಅಥವಾ ಎರಡು ದಿವಸಗಳ ಹಿಂದೆ ನನಗೆ ಟೆಲಿಫೋನ್ ಮಾಡಿದ್ದರು. ಆದರೆ ಮತ್ತೆ ಮಾತನಾಡುವುದಕ್ಕೆ ಸಾಧ್ಯವಾಗಲಿಲ್ಲ. ಶ್ರೀಮಾನ್.ಕೆ. ಲಕ್ಕಪ್ಪನವರು ಮತ್ತು ಅವರ ಕುಟುಂಬದ ಸುಮಾರು 30 ವರ್ಷಗಳ ಸಂಬಂಧದಲ್ಲಿ ಯಾವ ಕಾರಣಕ್ಕೂ ಮನಸ್ತಾಪಕ್ಕೆ ಎಡೆ ಇಲ್ಲದೆ ಸ್ನೇಹಿತರಾಗಿ, ಸಮಾಜವಾದಿ ಪಕ್ಷದಲ್ಲಿರಲಿ ಕಾಂಗ್ರೆಸ್ ಪಕ್ಷದಲ್ಲಿರಲಿ ಅಥವಾ ನಾವು ಅವರು ಬೇರೆ ಬೇರೆ ಪಕ್ಷದಲ್ಲಿರಲಿ ಒಟ್ಟಾಗಿ ಕೆಲಸ ಮಾಡಿದಂಥ ಒಂದು ವಿಶೇಷವಾದ ಗುಣವನ್ನು ನಾವು ಲಕ್ಕಪ್ಪನವರಲ್ಲಿ ಕಂಡಿದ್ದೆವು.

ಅವರ ನಿಧನದಿಂದ ಸಂಸದೀಯ ನಡವಳಿಕೆಗೆ ಮತ್ತು ಸಂಸದೀಯ ವ್ಯವಹಾರ ಮಾಡತಕ್ಕಂಥ ಈ ಸಭೆಗೆ ಒಂದು ದೊಡ್ಡ ನಷ್ಟ. ಅವರ ಕುಟುಂಬ. ನಾನು ಸೀಮಿತವಾಗಿ ಅವರ ಕುಟುಂಬ ಎನ್ನುವಾಗ ಅವರ ಮಕ್ಕಳ ಮತ್ತು ಮನೆಯವರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಅವರದು ಬಹಳ ದೊಡ್ಡ ಕುಟುಂಬ ಈ ಎಲ್ಲಾ ಕುಟುಂಬಕ್ಕೆ ಸಾಂತ್ವನ ನಾವೇ ಮಾಡಿಕೊಳ್ಳಬೇಕು. ಹಿರಿಯ ಸದಸ್ಯರಾದ ಶ್ರೀಮಾನ್

ಕೆ.ಎಚ್. ರಂಗನಾಥ್‌ರವರು ಇಲ್ಲೇ ಇದ್ದಾರೆ. 1961ರಲ್ಲಿ ಅವರು ನಮ್ಮ ತಾಲ್ಲೂಕಿನಿಂದ ಆಯ್ಕೆಯಾದ ಮೊದಲನೇ ಸಮಾಜವಾದಿ. ನಾವೆಲ್ಲಾ ಒಂದು ಕಡೆ ಸೇರುತ್ತಿದ್ದೆವು. ನನ್ನ ಅನಿಸಿಕೆ ಪ್ರಕಾರ, ಶ್ರೀಮಾನ್ ಲಕ್ಕಪ್ಪನವರನ್ನು ಶ್ರೀಮಾನ್ ಕೆ.ಎಚ್. ರಂಗನಾಥ್‌ರವರೇ ಸಮಾಜವಾದಿ ಪಕ್ಷದ ಸದಸ್ಯರನ್ನಾಗಿ ಮಾಡಿದರು. ನಂತರ 1962ರಲ್ಲಿ ಇಂಡಿಪೆಂಡೆಂಟ್ ಮೆಂಬರ್ ಆಗಿ ಬಂದರು. ಇವೆಲ್ಲವನ್ನೂ ನೆನೆಸಿಕೊಂಡು ಅಪಾರವಾದಂಥ ಅವರ ಕುಟುಂಬಕ್ಕೆ ಶಾಂತಿ ದೊರೆಯಲೆಂದು ಹೇಳುತ್ತೇವೆ. ಹಾಗೆಯೇ ಶ್ರೀಮಾನ್ ಶ್ರೀನಿವಾಸ ನಾಯಕರು, ಶ್ರೀ ಎನ್. ಎಚ್.ಗೌಡರು ನಾನು ವಿಧಾನಸಭಾ ಅಧ್ಯಕ್ಷನಾಗಿದ್ದಾಗ ಅವರು ಸದಸ್ಯರಾಗಿದ್ದರು.

ಅವರನ್ನು ನಾನು ತೀರಾ ಹತ್ತಿರದಿಂದ ಬಲ್ಲವನು ಅವರ ಕ್ಷೇತ್ರದಲ್ಲಿ ಓಡಾಟ ಇತ್ತು. ಶ್ರೀಮಾನ್ ಎಂ.ಹೆಚ್. ಮಹಂತ ದೇವರು ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿಯವರ ತಂದೆಯವರು. ಅವರು ತೀರಿಕೊಂಡಾಗ ನಾನು ಅವರ ಮನೆಗೆ ಹೋಗಿದ್ದೆ. ಅದಕ್ಕೂ ಮುಂಚೆ ಅವರನ್ನು ಒಂದೆರೆಡು ಬಾರಿ ನೋಡಿದ್ದೇ. ಹಳೆಯ ಮೈಸೂರು ಚರಿತ್ರೆಯನ್ನು ಏನಾದರೂ ತಿಳಿದುಕೊಳ್ಳಬೇಕೆಂದಿದ್ದರೆ, ಅವರ ಹತ್ತಿರ ಕುಳಿತುಕೊಂಡು ಕೇಳಿದ್ದರೆ ಸಾಕಾಗುತ್ತಿತ್ತು. ಬಹುಶಃ ಬಹು ಭಾಗ ಚರಿತ್ರೆಯ ಪಾಠವನ್ನು ಪ್ರೊ. ನಂಜುಂಡಸ್ವಾಮಿಯವರಿಗೆ ಕಲಿಸಿದವರು ಅವರ ತಂದೆಯವರೇ ಎಂದು ನಾನು ಅನಂತರ ಅಂದುಕೊಂಡೆ. ಅವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಎಷ್ಟು ಹೊತ್ತಾದರೂ ಮುಗಿಯುತ್ತಿರಲಿಲ್ಲ. ಇದು ಶ್ರೀಮಾನ್ ಅಜೀಜ್ ಸೇಠ್‌ರವರಿಗೆ ಹೆಚ್ಚು ಗೊತ್ತಿರಬೇಕು. ನಾವು ಬಿಡಿಸಿಕೊಂಡು ಬರಬೇಕೇ ಹೊರತು ಅವರು ಬಿಟ್ಟು ಹೋಗುತ್ತಿರಲಿಲ್ಲ. ಅವರು ತುಂಬು ಜೀವನವನ್ನು ಮುಗಿಸಿದ್ದಾರೆ.ಹಾಗೆಯೇ ಕಾಂತರಾಜಪುರದ ಶ್ರೀಮಾನ್ ಲಕ್ಕಪ್ಪನವರನ್ನು ನಾನು ತೀರಾ ಸನಿಹದಿಂದ ಬಲ್ಲೆ. ರಾಜ್ಯದ ಮಂತ್ರಿಯಾಗಿ ಉತ್ತಮವಾದಂಥ ಸೇವೆಯನ್ನು ಸಲ್ಲಿಸಿದವರು. ಆದಾದನಂತರ ಸಾರ್ವಜನಿಕ ಜೀವನದಿಂದ ಹೊರಬಂದ ನಂತರ ಸಮಾಜಿಕ ಕಾರ್ಯಕರ್ತರಾಗಿ ವಿಶೇಷವಾಗಿ ದುಡಿಯುತ್ತಿದ್ದರು.

ಶ್ರೀಮಾನ್ ಸೋಮನಾಥ್ ಅಯ್ಯರ್‌ರವರ ಪ್ರಸ್ತಾಪಕ್ಕೆ ಇಲ್ಲಿ ಮುಖ್ಯವಾದ ಕಾರಣ, ಅವರು ರಾಜ್ಯದ ಹಂಗಾಮಿ ರಾಜ್ಯಪಾಲರಾಗಿದ್ದರು ಎಂದು ಅವರು ರಾಜ್ಯ ಪಾಲರಾಗಿದ್ದಾಗ ನಾನು ಚಿಕ್ಕಮಗಳೂರಿನಲ್ಲಿ ಬಾರ್ ಅಸೋಷಿಯೇಷನ್ ಕಾರ್ಯದರ್ಶಿಯಾಗಿದ್ದೆ ಅವರ ಒಂದು ಕಾರ್ಯಕ್ರಮ ಚಿಕ್ಕಮಗಳೂರಿನಲ್ಲಿತ್ತು. ರಾಜ್ಯಪಾಲರು ಬರುತ್ತಾರೆಂದರೆ, ಆಗ ಒಂದು ದೊಡ್ಡ ಕ್ರಿಯೆ.ಒಂದು ಸಭೆಯನ್ನು ವಿರ್ಪಡಿಸಿ, ಒಂದು ಊಟದ ವ್ಯವಸ್ಥೆಯನ್ನು ಮಾಡಿದ್ದೆವು. ಸಭೆಯನ್ನು ಮುಗಿಸಿ ಹೊರಡುವಾಗ, ಇದರ ವ್ಯವಸ್ಥೆಯನ್ನೆಲ್ಲ ಯಾರು ಮಾಡಿದರು. ಎಂದರು. ನಾನು ಸ್ವಲ್ಪ ಹೆಮ್ಮೆಯಿಂದ ನಾನು ಮಾಡಿದ್ದೇನೆ. ನಾನು ಇದಕ್ಕೆ ಕಾರ್ಯದರ್ಶಿ ಎನ್ನುವ ಮಾತನ್ನು ಹೇಳಿದಾಗ, ಅವರು ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸಿ, He deserves all side encouragement ಎನ್ನತಕ್ಕಂತಹ ಮಾತನ್ನು ಹೇಳಿದರು. ಸೋಮನಾಥ್ ಅಯ್ಯರ್‌ರವರಲ್ಲಿ ವಕೀಲ ವಿಶೇಷವಾಗಿ ನ್ಯಾಯಾಧೀಶರಾಗಿ ಒಂದು ವೀಕ್ ನೆಸ್ ಇತ್ತು. ಅದೇನೆಂದರೆ, ಜೂನಿಯರ್ ಲಾಯರ್‌ಗಳು ಯಾರಾದರೂ ಹೋದರೆ, ಅದು ಸರಿಯೋ ತಪ್ಪೋ ಪ್ರೋತ್ಸಾಹವನ್ನು ಕೊಡುತ್ತಿದ್ದರು.

ಒಮ್ಮೆ ಹೈಕೋರ್ಟಿಗೆ ಅವರೊಂದಿಗೆ ಹೋಗಬೇಕಾದ ಪ್ರಸಂಗ ಬಂದಿತು. ಹೈಕೋರ್ಟಿಗೆ ಬಂದ ಭೀತಿ ಬೇರೆ. ಶ್ರೀ ನಂಜಪ್ಪನವರು ಸೀನಿಯರ್ ವಕೀಲರಾಗಿದ್ದರು. ನಂಜಪ್ಪನವರ ಬುದ್ಧಿವಂತಿಕೆ ಏನು ಎಂದು ನನಗೆ ಗೊತ್ತಿರಲಿಲ್ಲ. ನೀವು ಇಲ್ಲೇ ಕುಳಿತುಕೊಳ್ಳಿ ಕೇಸು ಬರುತ್ತದೆ. ಕರೆದರೆ ಸೀನಿಯರ್ ಬರುತ್ತಾರೆ ಎಂದು ಹೇಳಿ

ಎಂದು ಹೋದರು, ನಾನು ಹಾಗೆಯೇ ನಿಜವಿರಬೇಕು ಎಂದು ಕುಳಿತಿದ್ದೆ ಆದರೆ ಫ್ಯಾಕ್ಟ್ ಸ್ವಲ್ಪ ತಿಳಿದುಕೊಂಡಿದ್ದೆ ಕೇಸನ್ನು ಕರೆದರು ಎದ್ದು ನಿಂತೆ He said "please tell me what you have got to say". ಒಂದು ಬೇಲ್ ಅಪ್ಲಿಕೇಷನ್ ಸೆಕಂಡ್ ಆಫೀಲ್ ಬಂದಿತ್ತು. ನಿನಗೆ ತಿಳಿದಿರುವುದನ್ನು ಹೇಳಪ್ಪ ಎಂದು ಹೇಳಿದರು. ನನಗೆ ತಿಳಿದಿರುವುದನ್ನು ಹೇಳಿದೆ. ಬೇಲ್ ಗ್ರಾಂಟೆಡ್ ಎಂದು ಹೇಳಿ ಬೆನ್ನುತಟ್ಟಿ ಹೊರಗೆ ಕಳಿಸಿದರು. ಅಷ್ಟರಲ್ಲಿ ನಮ್ಮ ಸೀನಿಯರ್ ಲಾಯರ್ ಒಳಗೆ ಬಂದರು, ಏನಾಯಿತು ಎಂದರು ಬೇಲ್ ಸಿಕ್ಕಿತು. ಎಂದು ಹೇಳಿದೆ This mischief Nanjappa alone can play ಎನ್ನತಕ್ಕಂತಹ ಮಾತನ್ನು ಹೇಳಿದರು. ಅಷ್ಟರ ಮಟ್ಟಿಗೆ ನಮ್ಮ ಜೂನಿಯರ್ ಅಡ್ವೋಕೇಟ್ಸನ್ನೂ ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದ ಒಂದು ಉದಾತ್ತ ಸ್ವಭಾವ ಅವರದು. ಅವರೂ ಕೂಡ ತುಂಬು ಜೀವನ ನಡೆಸಿ ಇವತ್ತು ನಮ್ಮ ಮುಂದೆ ಇಲ್ಲ. ಶ್ರೀಮಾನ್ ಟಿ.ವಿ. ಚಂದ್ರೇಶೇಖರಪ್ಪನವರು ನನಗೆ ತೀರಾ ಆತ್ಮೀಯ ಗೆಳೆಯರಲ್ಲಿ ಒಬ್ಬರು ನಾನು ಸಂಸತ್ತಿಗೆ ಒಟ್ಟಿಗೆ ಪ್ರವೇಶ ಮಾಡಿದವರು ನಾನು ಅವರು ಸಂಸತ್ತಿನಲ್ಲಿ ಏನು ಕೆಲಸ ಮಾಡಿದರು ಎಂದು ಹೆಚ್ಚು ಹೇಳಲು ಇಲ್ಲಿ ಅವಕಾಶವಿಲ್ಲ. ಆದರೆ ಸದಸ್ಯರಾಗಿ ನನ್ನ ಕ್ಷೇತ್ರಕ್ಕೆ ರಾಜ್ಯಕ್ಕೆ ಬಹಳ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿದ್ದಾರೆ. ಇವತ್ತು ಭದ್ರಾವತಿಯಲ್ಲಿರತಕ್ಕ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಂಪನಿಯನ್ನು ಕೇಂದ್ರ ಸರ್ಕಾರದ ಸಹಪಾಲಿನೊಂದಿಗೆ ಸ್ಟೀಲ್ ಪ್ರಾಧಿಕಾರದವರೇನಾದರೂ ತೆಗೆದುಕೊಳ್ಳಲು ಪ್ರಯತ್ನ ಮಾಡಿದ್ದರೆ ಅದರಲ್ಲಿ ಅವರದು ಬಹಳ ಅಚ್ಚು ಒತ್ತಿರತಕ್ಕ ಕೆಲಸ. ಅವರೂ ಕೂಡ ಅಕಾಲಿಕ ಮರಣವನ್ನಪ್ಪಿದ್ದಾರೆ.

ಇನ್ನು ಶ್ರೀಮಾನ್ ಉಮರಬ್ಬನವರದಂತೂ ನನ್ನ ನೀರಿಕ್ಷೆಗೆ ಮೀರಿದಂತಹ ಒಂದು ನೋವು. ಕಾರಣ ಉಮರಬ್ಬರವರನ್ನು ಯಾರಾದರೂ ಒಂದು ಸಾರಿ ನೋಡಿದ್ದರೆ ಅಂತಹ ಮತ್ತೊಬ್ಬ ಸ್ನೇಹಿತ ಸಿಗುತ್ತಾರೋ ಇಲ್ಲವೋ ಎನ್ನತಕ್ಕಂತಹ ಶಂಕೆ ಬರತಕ್ಕದ್ದುಸ್ವಾಭಾವ. ಶಾಸನ ಸಭೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಅಷ್ಟು ಸೊಗಸಾದಂಥ ಕನ್ನಡವನ್ನು ನಾವ್ಯಾರೂ ಬಳಸಲು ಸಾಧ್ಯವಿಲ್ಲವೇನೋ ಎಂದು ಅನ್ನಿಸುತ್ತದೆ. ಭಾಷೆಯ ಮೇಲೆ ಅವರಿಗಿದ್ದ ಪ್ರಭುತ್ವ ಮತ್ತು ಒಟ್ಟಾರೆ ಅವರ ಕನ್ನಡತನ ನಮ್ಮ ಮನಸ್ಸಿನಲ್ಲಿ ಶಾಶ್ವತವಾಗಿ ಅಚ್ಚೊತ್ತಿ ನಿಲ್ಲತಕ್ಕಂತಹ ಒಂದು ವ್ಯಕ್ತಿತ್ವ ಅವರದು ತೀರಾ ಕಿರಿಯ ವಯಸ್ಸಿನಲ್ಲಿ ಅವರು ಅಪಘಾತದಿಂದ ಮರಣವಾದದ್ದಂತೂ ಸರ್ಕಾರ ಗಮನಿಸಬೇಕಾದ ಕೆಲಸ ಇವರ ಶವವನ್ನು ಗುರುತಿಸಲು ಇವರು ಯಾರು ಎಂದು ತಿಳಿಯಲು ಸುಮಾರು ಒಂದುವರೆ ಗಂಟೆಯಾಗಿದೆ. ಅಂದರೆ ಇವತ್ತು ಜವಾಬ್ದಾರಿ ಸ್ಥಾನದಲ್ಲಿದ್ದುನಾಡಿಗೆ ನುಡಿಗೆ ಕೆಲಸ ಮಾಡಿದಂತವರನ್ನು ಗುರುತಿಸಲು ಒಂದು, ಒಂದುವರೆ ಗಂಟೆಯಾಗಿದೆ ಎಂದರೆ ಇನ್ನು ಉಳಿದವರ ಸ್ಥಿತಿ ಏನು ಎನ್ನತಕ್ಕದನ್ನು ಯೋಚನೆ ಮಾಡುವಂತಹ ಸ್ಥಿತಿ ಬಂದಿದೆ. ಶ್ರೀ ಉಮರಬ್ಬನವರ ಸಾವಿನಿಂದ ನನಗಂತೂ ವೈಯಕ್ತಿಕವಾದಂತಹ ನಷ್ಟ ಕನ್ನಡ ನಾಡಿಗೆ ಆದಂತಹ ನಷ್ಟವೆಂದು ನಾನು ಭಾವನೆ ಮಾಡುತ್ತೇನೆ.

ಶ್ರೀಮಾನ್ ಹೆಚ್.ಸಿ. ಲಿಂಗಾರೆಡ್ಡಿ ಅವರು ರಾಜ್ಯದಲ್ಲಿ ಎರಡು ಬಾರಿ ಮಂತ್ರಿಗಳಾಗಿ, ಶಾಸನಸಭಾ ಸದಸ್ಯರಾಗಿ ಹಿರಿಯ ಮಾರ್ಗದರ್ಶಕರಾಗಿ, ಹಳೆಯ ಮೈಸೂರಿನಿಂದ ಹಿಡಿದು ವಿಶಾಲ ಕರ್ನಾಟಕವಾಗುವರಿಗೆ ದುಡಿದಂತಹವರು ಮತ್ತು ಸಂವಿಧಾನ ರಚನಾ ಸಮಿತಿಯ ಸದಸ್ಯರಾಗಿಕೆಲಸ ಮಾಡಿದವರು. ಇವರ ನಿಧನದಿಂದ ಕನ್ನಡ ನಾಡಿಗೆ, ಕರ್ನಾಟಕಕ್ಕೆ ತುಂಬಲಾರದ ನಷ್ಟವಾಗಿದೆ. ಈ ಎಲ್ಲಾ ಮಹಾನುಭಾವರ ನಿಧನಕ್ಕೆ ನನ್ನ ವೈಯಕ್ತಿಕವಾಗಿ ನನ್ನ ಪಕ್ಷದ ಮತ್ತು ಸದನದ ನಮ್ಮ ಎಲ್ಲಾ ಸದಸ್ಯರ ಪರವಾಗಿ ಸಂತಾಪವನ್ನು ಸೂಚನೆ ಮಾಡಿ, ಇವರ ಆತ್ಮಕ್ಕೆ ಚಿರಶಾಂತಿಯನ್ನು

ದಯಾಮಯನಾದ ಭಗವಂತನು ಕರುಣಿಸಲಿ ಎಂದು ಹೇಳಿ, ತಮ್ಮ ಜೊತೆಗೆ ನನ್ನ ಧ್ವನಿಗೂಡಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ತಾವು ಸಂತಾಪಸೂಚನೆ ನಿರ್ಣಯವನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಸುಮಾರು 11 ಜನ ಈ ನಾಡಿಗೆ ಒಂದಲ್ಲಾ ಒಂದು ರೀತಿ ಸೇವೆ ಸಲ್ಲಿಸಿದಂತಹ ಪ್ರಮುಖರು ದೈವಾಧೀನರಾಗಿರುವಂಥಾದ್ದನ್ನು ನಮ್ಮ ಗಮನಕ್ಕೆ ತಂದಿದ್ದೀರಿ. ಈ ಹನ್ನೊಂದು ಜನರಲ್ಲಿ ಹತ್ತು ಜನ ವಿಧಾನ ಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ ಲೋಕಸಭೆಯಲ್ಲಿ ಕೆಲಸ ಮಾಡಿದಂತಹ ಹಿರಿಯರು. ಮಂತ್ರಿಗಳಾಗಿ ಸೇವೆ ಸಲ್ಲಿಸಿದಂತಹ ಅನೇಕ ಹಿರಿಯರಿದ್ದಾರೆ. ರಾಜ್ಯಪಾಲರಾಗಿ, ನ್ಯಾಯಾಧೀಶರಾಗಿಸೇವೆ ಸಲ್ಲಿಸಿದಂತಹ ಶ್ರೀಮಾನ್ ಸೋಮನಾಥ್ ಅಯ್ಯರ್ ಅವರೂ ದೈವಾಧೀನರಾಗಿದ್ದಾರೆ ಬಹುಶಃ ಲಕ್ಕಪ್ಪ ಅವರು ಇಲ್ಲಿ ಇಲ್ಲ ಎಂದು ಕಲ್ಪನೆ ಮಾಡಿಕೊಳ್ಳುವುದಕ್ಕೂ ಸಹ ಸಾಧ್ಯವಿಲ್ಲ. ಅವರು ಎದ್ದುನಿಂತರೆ ನಿರ್ಭೀತಿಯಿಂದ ಮಾತನಾಡುವಂತಹ ಕಂಡದ್ದನ್ನು ಕಂಡಂತೆ ಹೇಳುವುದಕ್ಕೆ ಎಂದೂ ಹಿಂದುಮುಂದು ನೋಡದಂತಹ ವ್ಯಕ್ತಿ. ಬಹುಶಃ ಇವತ್ತಿನ ಪರಿಸ್ಥಿತಿಗಳು ಸಹ ಅವರ ಈ ರೀತಿಯ ಒಂದು ಸಾವಿಗೆ ಕಾರಣವಾಯಿತೋ ಏನೋ ಅವರ ಮನಸ್ಸಿಗೆ ಅಂತ ಕಾಣುತ್ತದೆ. ಏಕೆಂದರೆ ಸಾವನ್ನು ಅಪ್ಪಿರುವಂತಹ ಹಿರಿಯರನ್ನು ನೋಡಿದಾಗ ಅವರಲ್ಲಿ ತುಂಬು ಜೀವನ ನಡೆಸಿದಂತಹ ಹಿರಿಯರಿದ್ದಾರೆ, ಇನ್ನೂ ಸೇವೆ ಸಲ್ಲಿಸಲು ಶಕ್ತಿ ಇದ್ದಂತಹ ವ್ಯಕ್ತಿಗಳೂ ಇದ್ದಾರೆ. ಈಗ ತಾನೇ ತಾವೆಲ್ಲಾ ಉಮರಬ್ಬ ಅವರ ಜೀವನದ ಬಗ್ಗೆ ಒಳ್ಳೆಯ ಮಾತನ್ನು ಹೇಳಿದಿರಿ. ಅವರು ಇದ್ದಾಗ ನಡೆದದ್ದನ್ನು ಹೇಳಿದಿರಿ. ಇಲ್ಲಿ ನಾನು ಸಹ ಸದಸ್ಯನಾಗಿ, ಅವರು ಮಾತನಾಡುತ್ತಿದ್ದುದನ್ನು ಕೇಳುವಂತಹ ಅವಕಾಶ ಸಿಕ್ಕಿತು.

ಕನ್ನಡದ ಬಗ್ಗೆ ಎಷ್ಟೊಂದು ಪ್ರಭಾವಿತರಾಗಿದ್ದರೆಂದರೆ, ಅವರ ನಾಲಿಗೆಯಲ್ಲಿ ಕನ್ನಡ ಸರಸ್ವತಿ ಕುಣಿಯುತ್ತಿದ್ದಳೋ ಏನೋ ಎನ್ನುವ ರೀತಿ ಇತ್ತು ಅವರು ಮಾತನಾಡುವ ವೈಖರಿ ಬಹುಶಃ ಇದುವರೆಗೆ ಈ ಮಾತುಗಳನ್ನು ಕೇಳುವುದಕ್ಕೆ ಆಗುತ್ತಾ ಇಲ್ಲ. ಒಳ್ಳೆಯ ರೀತಿಯಿಂದ ಸದನದಲ್ಲಿ ಕೆಲಸಮಾಡಿದಂತಹ ಒಬ್ಬ ವ್ಯಕ್ತಿಯನ್ನು ನಾವು ಹಿಂದೆ ಕಂಡಿದ್ದೆವು. ಅವರು ಅಕಾಲ ಮರಣಕ್ಕೆ ತುತ್ತಾದರು. ನಮ್ಮ ಜಿಲ್ಲೆಯವರಾದಂತಹ ಲೋಕಸಭಾ ಸದಸ್ಯರಾಗಿ ಕೆಲಸ ಮಾಡಿದಂತಹ ಶ್ರೀಮಾನ್ ಟಿ.ವಿ. ಚಂದ್ರಶೇಖರಪ್ಪನವರು ಆ ಜಿಲ್ಲೆಯ ಈ ನಾಡಿನ ಅಭಿವೃದ್ಧಿಗೋಸ್ಕರ ದುಡಿದಂತಹವರು. ಅವರು ಸಹ ಈ ರೀತಿ ಇವತ್ತು ನಮ್ಮನ್ನು ಅಗಲಿದ್ದಾರೆ. ಅದೇ ರೀತಿ ಹಿರಿಯರಾದಂತಹ ಸನ್ಮಾನ್ಯ ಮಂಚತದೇವರು ಆಗಲಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಪ್ರಭಾವಿತರಾಗಿ ಕೆಲಸ ಮಾಡಿದಂತಹ ಎನ್, ಹೆಚ್.ಗೌಡರನ್ನು ಕಳೆದುಕೊಂಡಿದ್ದೇವೆ. ಶ್ರೀನಿವಾಸನ್, ಕಾಪು ಸಂಜೀವ ಶೆಟ್ಟರು, ಹಲಸನಾಡು ಸುಬ್ಬರಾವ್ ಅವರುಗಳು ದೈವಾಧೀನರಾಗಿದ್ದಾರೆ. ಅದೇ ರೀತಿ ಲಿಂಗಾರೆಡ್ಡಿಯವರು, ಕಾಂತರಾಜಪುರದ ಮಾಜಿ ಸಚಿವರಾಗಿದ್ದ ಲಕ್ಕಪ್ಪನವರು ಈ ರೀತಿ ಹನ್ನೊಂದು ಜನ ನಾಡಿನ ಸೇವೆ ಸಲ್ಲಿಸಿದಂತಪ ಹಿರಿಯರು ದೈವಾಧೀನರಾಗಿರುವಂತಹ ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೊಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ ಮತ್ತೆ ಅವರ ಕುಟುಂಬ ವರ್ಗದವರಿಗೆ ಸಹ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಭಗವಂತನು ಕೊಡಲಿ ಎಂದು ನನ್ನ ಪರವಾಗಿ ನನ್ನ ಪಕ್ಷದ ಪರವಾಗಿ ಅವರ ಕುಟುಂಬಕ್ಕೆ ಸಂತಾಪವನ್ನು ಸೂಚಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ರಾಜ್ಯಕ್ಕೆ, ರಾಷ್ಟ್ರಕ್ಕೆ ತಮ್ಮದೇ ಆದ ಸೇವೆಯನ್ನು ಸಲ್ಲಿಸಿರತಕ್ಕ 11 ಮಂದಿ ಮಹನೀಯರು ನಿಧನರಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರತಕ್ಕ ಕೆಲಸವನ್ನು ಇವತ್ತೂ ನಾವು ಮಾಡುತ್ತಿದ್ದೇವೆ. ಈ ಸದನದಲ್ಲಿ ಹಾಲಿ ಸದಸ್ಯರಾಗಿದ್ದ ಲಕ್ಕಪ್ಪನವರನ್ನು ನಾನು ವಿದ್ಯಾರ್ಥಿ ದೆಸೆಯಿಂದ ಬಲ್ಲೆ. ತಮಗೂ ಸಹ ಅವರ ಪರಿಚಯ ಇದೆ. ಹಿಂದೆ ಹಳೇ ಮೈಸೂರು ಭಾಗದಲ್ಲಿ ಮೈಸೂರು, ಮೈಸೂರಾಗಿಯೇ ಉಳಿಯಬೇಕೆಂಬ ಒಂದು ಚಳುವಳಿ ಬಹಳ ತೀವ್ರವಾಗಿ ನಡೆಯಿತು. ಅಂಥ ಸಂದರ್ಭದಲ್ಲಿ ನಾನು ಬೆಂಗಳೂರಿನಲ್ಲಿರತಕ್ಕ ಒಕ್ಕಲಿಗರ ಸಂಘದ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿಯಾಗಿದ್ದೆ, ಮೈಸೂರು, ಮೈಸೂರಾಗಿಯೇ ಉಳಿಯಬೇಕೆಂಬ ಚಳುವಳಿಯ ಕೇಂದ್ರ ಸ್ಥಾನ ಆ ವಿದ್ಯಾರ್ಥಿ ನಿಲಯವಾಗಿತ್ತು. ಆದರೆ ನಾನು ಮತ್ತು ಇನ್ನೊಬ್ಬ ಸ್ನೇಹಿತರು ಇದು ವಿಶಾಲ ಕರ್ನಾಟಕ ಆಗಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದೆವು. ಅಂಥ ಸಂದರ್ಭದಲ್ಲಿ ಅನೇಕ ಚಳುವಳಿಗಳು ನಡೆಯತಕ್ಕ ಕಾಲದಲ್ಲಿ, ಆ ಚಳುವಳಿಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದರು. ಆಗ ನಾವು ಲಕ್ಕಪ್ಪನವರನ್ನು ವಿರೋಧಿಸುತ್ತಿದ್ದರೂ ಅವರ ಸಂಘಟನಾಶಕ್ತಿ ಮತ್ತು ಅವರು ನಡೆಸುತ್ತಿದ್ದ ಹೋರಾಟವನ್ನು ಕಣ್ಣಾರೆ ಕಾಣತಕ್ಕ ಅವಕಾಶ ಒದಗಿಬಂದಿತ್ತು.

ಆ ಸಂದರ್ಭದ್ಲಲಿ 'ವಿಶ್ವಾಮಿತ್ರ' ಎಂಬ ಪತ್ರಿಕೆ ಇತ್ತು ಆ ಪತ್ರಿಕೆಯಲ್ಲಿ ಮತ್ತು ಸಾಮಾನ್ಯವಾಗಿ ಅವರನ್ನು "ಬೆಂಗಳೂರಿನ ಕೃಷ್ಣೇವ್" ಎಂದು ಕರೆಯುತ್ತಿದ್ದರು. ಅವರು ಬಹಳ ಉಗ್ರವಾದ ಹೋರಾಟದ ಮುಂಚೂಣಿಯಲ್ಲಿರುತ್ತಿದ್ದರು. ಆದರೆ ಕಾಲ ಬದಲಾವಣೆಯಾಯಿತು. ಈಗ ಮೈಸೂರು ಹೋಗಿ ವಿಶಾಲ ಕರ್ನಾಟಕವಾಗಿದೆ.ಈ ವಿಷಯವನ್ನು ನಾನು ಏತಕ್ಕೆ ಪ್ರಸ್ತಾಪಿಸುತ್ತಿದ್ದೇನೆಂದರೆ ಮಾನ್ಯ ಲಕ್ಕಪ್ಪನವರು ಏನಾದರೂ ನಂಬಿದರೆ ಅದನ್ನು ಶತಾಯಗತಾಯ ಕೊನೆಯ ಹಂತದವರೆಗೆ ಮಾಡುತ್ತಿದ್ದರು, ಅದಕ್ಕೋಸ್ಕರ ಅವರು ಎಲ್ಲಾ ಶಕ್ತಿಯನ್ನು ವಿನಿಯೋಗ ಮಾಡುತ್ತಿದ್ದರು. ಅದೇ ರೀತಿ ಲೋಕಸಭೆಯಲ್ಲಿ ಯಾವ ರೀತಿ ಕೆಲಸ ಮಾಡಿದ್ದಾರೆಂಬ ಬಗ್ಗೆ ತಾವು ಪ್ರತ್ಯಕ್ಷ ದರ್ಶಿಯಾಗಿ ಹೇಳಿದ್ದೀರಿ. ವಿಧಾನಸಭೆಗೆ ಅವರು ಈ ಸಾರಿ ಚುನಾಯಿತರಾದಾಗ ನಾನು ಅವರು ಒಟ್ಟಿಗೆ ಒಂದೇ ವಿಧಾನಸಭೆಯಲ್ಲಿ ಕುಳಿತುಕೊಳ್ಳತಕ್ಕ ಅವಕಾಶ ಒದಗಿಬಂದಿತ್ತು. ಪ್ರಶ್ನೋತ್ತರ ವೇಳೆಯಲ್ಲಿ ಅವರು ಪ್ರಶ್ನೆ ಹಾಕುತ್ತಿದ್ದುದರ ಬಗ್ಗೆ ನಾನು ಒಂದೆರಡು ಸಾರಿ ತಮ್ಮ ಗಮನಕ್ಕೆ ತಂದಿರತಕ್ಕ ನಿದರ್ಶನಗಳು ಇವೆ. ಅವರು ಪ್ರಶ್ನೆಗಳನ್ನು ಕೇಳಿದರೆ ಸಮರ್ಪಕವಾದ ಉತ್ತರ ಬರಲೇಬೇಕೆಂಬ ಧಾಟಿಯಲ್ಲಿ ಪ್ರಶ್ನೆಗಳನ್ನು ಕೇಳುತ್ತಿದ್ದರು.

ಅಂಥವರು ಇವತ್ತಿನ ದಿವಸ ಇಲ್ಲ. ಆದರೆ ಅವರು ರಾಜ್ಯಕ್ಕೆ ದೇಶಕ್ಕೆ ಮಾಡಿರತಕ್ಕ ಸೇವೆ ಅಮೋಘವಾದುದು. ಅವರಾದ ಮೇಲೆ ನನಗೆ ಬಹಳ ಹತ್ತಿರದಿಂದ ಪರಿಚಯ ಇರತಕ್ಕವರು ಅಂದರೆ ಶ್ರೀ ಎನ್.ಹೆಚ್. ಗೌಡರು ಅವರು ಉಪಾಧ್ಯಾಯರಾಗಿ ಕೆಲಸ ಮಾಡಿದವರು. ಅವರು ಉಪಾಧ್ಯಾಯರಾಗಿದ್ದುಕೊಂಡೇ ಈ ಸಭೆಯಲ್ಲಿ ಸದಸ್ಯರಾದರು. ಅವರು ಭಾಷಣ ಮಾಡುವುದನ್ನು ನಾನು ಅವರ ಪಕ್ಕದಲ್ಲಿ ಕುಳಿತು 1983ರಿಂದ 1985ರವರೆಗೆ ಕೇಳಿದ್ದೇನೆ. ಅವರು ಭಾಷಣ ಮಾಡುವಾಗ ಅವರು ಉಪಯೋಗಿಸುತ್ತಿದ್ದ ಕನ್ನಡದ ಪದಗಳು ಭಾಷೆ ನಿಜವಾಗಿ ಉಪಾಧ್ಯಾಯರು ಅನ್ನಿಸಿಕೊಳ್ಳುವುದಕ್ಕೆ ಬಹಳ ಲಾಯಕ್ಕಾಗಿದ್ದರು. ಒಂದು ವಿಷಯವನ್ನು ಪ್ರಸ್ತಾಪ ಮಾಡಿದರೆ ಅಷ್ಟೇ ಚಿಕ್ಕ ಮತ್ತು ಚೊಕ್ಕವಾಗಿ ಪ್ರಸ್ತಾಪ ಮಾಡುತ್ತಿದ್ದರು. ಅವರು ಉಪಯೋಗಿಸುತ್ತಿದ್ದ ಭಾಷೆ ಅಮೋಘವಾದ ಕನ್ನಡ ಭಾಷೆಯಾಗಿರುತ್ತಿತ್ತು. ನಂತರ

ಸ್ನೇಹಿತರಾದ ಶ್ರೀ ಉಮರಬ್ಬನವರು 1977ಕ್ಕಿಂತ ಮೊದಲು ರಾಜ್ಯದಲ್ಲಿರತಕ್ಕ, ದೇಶದಲ್ಲಿರತಕ್ಕ ಎಲ್ಲಾ ಪಕ್ಷಗಳು ಒಂದಾಗಿ ಜನತಾ ಪಕ್ಷ ಪ್ರಾರಂಭವಾದ ಕಾಲದಲ್ಲಿ ನಮ್ಮೊಡನೆ ಕೂಡ ಇದ್ದಂತವರು. ಅವರನ್ನು ನಾವು ಅನೇಕ ಕಡೆ ಭಾಷಣ ಮಾಡುವುದಕ್ಕೋಸ್ಕರವೇ ಕರೆದುಕೊಂಡು ಹೋಗುತ್ತಿದ್ದೆವು. ಅವರು ಅಷ್ಟೊಂದು ಸ್ವಚ್ಛವಾಗಿ, ಅಷ್ಟೊಂದು ಸ್ಫುಟವಾಗಿ ಕನ್ನಡವನ್ನು ಮಾತನಾಡುತ್ತಿದ್ದರು. ನನಗೆ ಗೊತ್ತಿರುವ ಹಾಗೆ, ಅವರ ಮಾತೃಭಾಷೆ ಕನ್ನಡ ಅಲ್ಲ ಅವರ ಮಾತೃಭಾಷೆ ಬಹುಶಃ ತುಳು ಅನ್ನಿಸುತ್ತದೆ. ಆದರೆ ಕನ್ನಡದಲ್ಲಿ ಅವರಿಗೆ ಇದ್ದಂತಹ ಆಳವಾದ ಅಭ್ಯಾಸ ಮತ್ತು ಅವರ ಪದ ಪ್ರಯೋಗ ಇನ್ಯಾರೂ ಮಾಡುವುದಕ್ಕೆ ಸಾಧ್ಯವಿಲ್ಲ. ನನಗಂತೂ ಸಾಧ್ಯವಿಲ್ಲವೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ಸಂದರ್ಭದಲ್ಲಿ ನಾನು ಸರ್ಕಾರದ ಗಮನಕ್ಕೆ ಒಂದು ಮಾತು ತರತಕ್ಕದ್ದು ಏನೆಂದರೆ, ಈ ಬೆಂಗಳೂರಿನಲ್ಲಿ ಸಾರಿಗೆ ಅವ್ಯವಸ್ಥೆ. ಅದರಲ್ಲೂ ಈ ಬಿ.ಟಿ.ಎಸ್. ಬಸ್ಸುಗಳು ಓಡಾಡತಕ್ಕ ರೀತಿ ನೀತಿ.ಅವರು ನಡೆಸತಕ್ಕ ರೀತಿ ನೋಡಿದರೆ ನನಗೆ ಅನೇಕ ಸಾರಿ ಭಯವಾಗಿದೆ.ಯಾವ ನಿಮಿಷದಲ್ಲಿ ಯಾರ ಮೇಲೆ ಈ ಬಸ್ಸು ಹೋಗುತ್ತದೆ ಎಂಬುದನ್ನು ಊಹಿಸುವುದು ಕೂಡ ಕಷ್ಟ. ಇವತ್ತೇನೋ ಒಬ್ಬ ಗಣ್ಯ ವ್ಯಕ್ತಿ ಆಗಿರತಕ್ಕವರ ಮೇಲೆ ಬಸ್ಸು ಹೋಗಿದೆ, ಆದ್ದರಿಂದ ಇಲ್ಲಿ ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ. ಆದರೆ ಪ್ರತಿನಿತ್ಯ ನಾವು ಕಾಣುತ್ತಿದ್ದೇವೆ. ಬೆಂಗಳೂರು ನಗರದಲ್ಲಿ ಬಿ.ಟಿ.ಎಸ್. ಬಸ್ಸುಗಳಿಗೆ ಇನ್ನೂ ಯಾರು ಯಾರು ಆಹುತಿಯಾಗ ಬೇಕಾಗಿದೆಯೋ? ಇದನ್ನು ಸರ್ಕಾರ ಇವತ್ತಿನ ದಿವಸ ತೀವ್ರವಾಗಿ ಗಮನಿಸಬೇಕು. ಯಮನ ವಿಜಿಂಟರಾಗಿ ಕೆಲಸ ಮಾಡುತ್ತಾ ಇರತಕ್ಕ ಬಿ.ಟಿ.ಎಸ್, ಬಸ್ಸುಗಳ ಸಿಬ್ಬಂದಿಯನ್ನು ಅದರಲ್ಲೂ ಮುಖ್ಯವಾಗಿ ಸಾರಿಗೆ ಸಚಿವರು ಗಮನಿಸಬೇಕಾಗಿರತಕ್ಕದ್ದು ಅಗತ್ಯ ಇದೆ.

ತಾವು ಒಂದು ಸಾರಿ ಎಲ್ಲಾದರೂ ಒಂದು ರಸ್ತೆ ಅಥವಾ ಸರ್ಕಲ್‌ನಲ್ಲಿ ಹೋಗಿ ಕುಳಿತರೆ ಅಥವಾ ನಿಂತರೆ ಗೊತ್ತಾಗುತ್ತದೆ. ಅಥವಾ ಕಾರಿನಲ್ಲಿ ಓಡಾಟ ನಡೆಸುತ್ತಾ ಇರುತ್ತೀರಿ. ಯಾವ ರೀತಿ ಬಿ.ಟಿ.ಎಸ್. ಬಸ್ಸುಗಳನ್ನು ಓಡಿಸುತ್ತಾರೆ ಎಂಬುದರ ಬಗ್ಗೆ ತಾವು ಎಲ್ಲರೂ ಗಮನಿಸಬೇಕು. ಸರ್ಕಾರ ಇದರ ಬಗ್ಗೆ ತೀವ್ರವಾಗಿ ಗಮನಿಸಬೇಕು. ಮತ್ತು ಮಾನ್ಯ ಗೃಹಸಚಿವರಲ್ಲೂ ವಿನಂತಿ ಮಾಡುತ್ತೇನೆ. ಅನೇಕ ಸಂದರ್ಭದಲ್ಲಿ ಇವರಿಗೆ ಪತ್ರ ಬರೆಯಬೇಕು. ಅಥವಾ ಖುದ್ದಾಗಿ ಹೇಳಬೇಕು. ಎಂದು ನನಗೂ ಕೂಡ ಮನಸ್ಸಿಗೆ ಬಂತು. ಆದರೆ ಸಮಯ ಈಗ ಒದಗಿ ಬಂದಿತು. ಇಬ್ಬರು ಸಚಿವರಿಗೂ ನಾನು ಹೇಳುತ್ತಿದ್ದೇನೆ. ಈ ಬಿ.ಟಿ.ಎಸ್. ಬಸ್‌ಗಳ ಓಡಾಟವನ್ನು ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಮಾಡದೇ ಇದ್ದರೆ ಇದು ಯಮನ ವಿಜೆಂಟ್ ಅಲ್ಲ ಯಮನೇ ಆಗತಕ್ಕ ಪರಿಸ್ಥಿತಿ ಬೆಂಗಳೂರಿನಲ್ಲಿ ಒದಗಬಾರದು ಎಂಬ ಮಾತನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಮತ್ತೆ ನಮ್ಮ ಜಿಲ್ಲೆಯವರು ಮಾನ್ಯ ಎಚ್.ಸಿ. ಲಿಂಗಾರೆಡ್ಡಿ ಯವರು. ನಾನು ಪ್ರಾಥಮಿಕ ಶಾಲೆ ಹಂತದಲ್ಲಿ ಇದ್ದಾಗಿನಿಂದ ಈ ಹಂತದವರೆಗೆ ಕೂಡ ಅವರನ್ನು ನಾನು ಚೆನ್ನಾಗಿ ಬಲ್ಲೆ. ನಮ್ಮ ಜಿಲ್ಲೆಯ ರಾಜಕೀಯದ ದಿಗ್ಗಜಗಳಾಗಿದ್ದಂಥವರು. ಅನೇಕರು, ನಮ್ಮಂಥ ಯುವಕರಿಗೆ ಸ್ಫೂರ್ತಿಯನ್ನು ತಂದಿರತಕ್ಕವರು. ಅವರು ಅಭಿವೃದ್ಧಿ ಶಾಖೆಯ ಉಪಸಚಿವರಾಗಿದ್ದಂಥ ಕಾಲದಲ್ಲಿ ನಮ್ಮ ಜಿಲ್ಲೆಯಲ್ಲಿರತಕ್ಕ ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಿಗೂ ಕೂಡ ಭೇಟಿ ನೀಡಿರತಕ್ಕವರು. ಭೇಟಿ ನೀಡಿ ಹಳ್ಳಿಯಲ್ಲಿ ರಸ್ತೆ ಸೌಕರ್ಯ ಅದರಲ್ಲೂ ಕುಡಿಯುವ ನೀರಿನ ಸೌಕರ್ಯದ ಬಗ್ಗೆ ಬಹಳ ಶ್ರದ್ಧೆಯನ್ನು ವಹಿಸಿರತಕ್ಕವರು. ಆಗ ಹೊಸದಾಗಿ ರೇಡಿಯೊ ಸಂಪರ್ಕ ಬಂದಿತ್ತು. ಪ್ರತಿಯೊಂದು ಹಳ್ಳಿಯಲ್ಲೂ ಕೂಡ, ನಮ್ಮ ಜಿಲ್ಲೆಯಲ್ಲೇ ಅಲ್ಲ,

ರಾಜ್ಯಾದ್ಯಂತ ರೇಡಿಯೊಗಳನ್ನು ಕೊಟ್ಟು ಅದರ ಮೂಲಕ ಜನತೆಗೆ ವ್ಯವಸಾಯದಲ್ಲಿ ಇರತಕ್ಕ ಸುದ್ದಿ ಸಮಾಚಾರಗಳನ್ನು ಜೊತೆಗೆ ಸ್ವಲ್ಪಮಟ್ಟಿಗೆ ಸಂಗೀತ ಮತ್ತು ಉಳಿದಂಥ ವಿಚಾರಗಳನ್ನು ಹಳ್ಳಿಗಳಿಗೆ ಮುಟ್ಟಿಸತಕ್ಕ ಒಂದು ವ್ಯವಸ್ಥೆಯನ್ನು ಮಾನ್ಯ ಲಿಂಗಾರೆಡ್ಡಿಯವರು ಮಾಡಿದರು. ಮತ್ತು ರಾಜಕೀಯದಲ್ಲಿ ಅನೇಕ ಏಳುಬೀಳುಗಳನ್ನು ಕೂಡ ಹೊಂದಿರತಕ್ಕವರು. ಬಹಳ ಹಂತದವರೆಗೂ ನಾನು ಮತ್ತು ಅವರು ವಿರೋಧವಾಗಿ ಇದ್ದವರು. ಅವರು ಕಾಂಗ್ರೆಸ್ ಪಕ್ಷದಲ್ಲಿದ್ದರು. ನಾವು ವಿರೋಧಪಕ್ಷದಲ್ಲಿದ್ದೆವು. ಅವರನ್ನು ವಿರೋಧಿಸತಕ್ಕ ಒಂದು ಸಂದರ್ಭ ಕೂಡ ನನಗೆ ಒದಗಿಬಂದಿತ್ತು. ಅದರ ಜೊತೆಗೆ ಎಮರ್ಜೆನ್ಸಿ ಬಂದಂಥ ಕಾಲದಲ್ಲಿ ಆ ಎಮರ್ಜೆನ್ಸಿಯನ್ನು ಧಿಕ್ಕರಿಸಿ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆಯನ್ನು ಕೊಟ್ಟು ನಮ್ಮ ಜೊತೆ ಕೆಲಸ ಮಾಡಿ ನಮಗೆ ಮಾರ್ಗದರ್ಶನ ಮಾಡತಕ್ಕ ಒಂದು ಕೆಲಸವನ್ನು ಅವರು ಮಾಡಿದರು. ಅವರನ್ನು ವಿರೋಧ ಮಾಡಿರತಕ್ಕ ಮತ್ತು ಅವರ ಜೊತೆಯಲ್ಲಿ ಕೆಲಸ ಮಾಡತಕ್ಕ ಅವಕಾಶ ನನಗೆ ಒದಗಿಬಂದಿದ್ದು ನನ್ನ ಸೌಭಾಗ್ಯ ಎಂದು ನಾನಾದರೂ ಕೂಡ ಭಾವಿಸುತ್ತೇನೆ. ಮತ್ತು ಉಳಿದಂಥ ಮಹನೀಯರ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಮತ್ತು ಸಂಪರ್ಕ ಇಲ್ಲದಿರುವ ಕಾರಣದಿಂದ ಅವರೆಲ್ಲರ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ಆಶಿಸಿ, ಈ ಸಭೆಯ ನಾಯಕರು, ವಿರೋಧಪಕ್ಷದ ನಾಯಕರು, ಇತರೆ ಸದಸ್ಯರುಗಳು ತಿಳಿಸಿರುವುದಕ್ಕೆ,ತಾವು ತಿಳಿಸಿರುವುದಕ್ಕೆ ಧ್ವನಿಗೂಡಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ SRI B.I. PATIL (Uchagon) : MR. Speaker Sir, it was really a sad and sudden demise of Sri K. Lakkappa, a sitting Member of this august House. There are no words to express the tremendous service he has rended in Social, Educational and Political field in various capacities. It is really a loss to all of us.

On behalf of Maharastra Ekikaran Samiti, we join you in offering our heartful condolences to the members of the bereaved family.

We pray Almighty to give courage to the members of the family of Sri K.Lakkappa to bear this irreparable loss.

We also join you in expressing our heartfelt condolences to the members of the bereaved families of all other deceased Ex-MLAs and MLCs mentioned by you.

+ ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್ (ಕಿತ್ತೂರ್) : ಸನ್ಮಾನ್ಯ ಅಧ್ಯಕ್ಷರೇ, ಸಮಾಜ ಜೀವನದಲ್ಲಿ ಬೆಳಕಾಗಿ ಬಾಳಿದಂತಹ ಹನ್ನೊಂದು ಜನ ಗಣ್ಯರು ನಿಧನರಾಗಿರುವುದು ಅತ್ಯಂತ ದುಃಖಕರವಾದ ಸಂಗತಿಯಾಗಿದೆ. ಇವರ ನಿಧನದಿಂದ ಈ ಸದನಕ್ಕೆ ಸಮಾಜಕ್ಕೆ ಅತ್ಯಂತ ಹಾನಿಯಾಗಿದೆ. ಇವರಲ್ಲಿ ನನಗೆ ಪರಿಚಿತರೆಂದರೆ ಇಬ್ಬರು ಒಬ್ಬರು ಮಹಾಂತದೇವರು - ಪ್ರೊ: ನಂಜುಂಡಸ್ವಾಮಿಯವರ ತಂದೆಯವರು. 95ರ ಮುಪ್ಪಿನ ಅವಸ್ಥೆಯಲ್ಲಿಯೂ ಅಂತಹ ಒಂದು ಚೈತನ್ಯ ಶೀಲ ಚಿಂತನಶೀಲ ವ್ಯಕ್ತಿಯಾಗಿದ್ದರು. ಅವರು ನಮಗೆ ಹೇಳಿದ ಮಾತು ನೆನಪಿಗೆ ಬರುತ್ತದೆ. ನೀವು ಹುಡುಗರು ಅಂತಹ ಏನೂ ಹೋರಾಟ ಮಾಡಲಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದರು. ಏಕೆಂದರೆ, ಅವರು ಒಬ್ಬ ಹುಟ್ಟು ಹೋರಾಟಗಾರರಾಗಿದ್ದರು. ಕಿಸಾನ್ ಮಜದೂರ್ ಪ್ರಜಾಪಾರ್ಟಿಯಲ್ಲಿ ಕೃಪಲಾನಿಯವರ ಜೊತೆಯಲ್ಲಿ ಹೋರಾಟ ಮಾಡಿರುವ ವಿಚಾರಗಳು

ನಮಗೆ ಹೇಳುತ್ತಿದ್ದರು. ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯಲ್ಲಿ ಹೋರಾಟ ಮಾಡಿದಂತಹ ವಿಚಾರಗಳನ್ನು ಹೇಳುತ್ತಿದ್ದರು. ಅಷ್ಟೇ ಅಲ್ಲದೆ, ಅವರ ಸಂಸದೀಯ ಜೀವನದ ವಿಚಾರಗಳನ್ನು ಹೇಳುತ್ತಿದ್ದರು. ಅವರು ರೆಪ್ರಸೆಂಟೇಟೀವ್ ಅಸೆಂಬ್ಲಿಯ ಸದಸ್ಯರಾಗಿದ್ದರು. ಮೈಸೂರು ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿ ಸದಸ್ಯರಾಗಿದ್ದರು, ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿ ಸದಸ್ಯರಾಗಿದ್ದರು, ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ. ಅಷ್ಟೇ ಅಲ್ಲದೆ, ಶಿಕ್ಷಣ ಕ್ಷೇತ್ರದಲ್ಲಿ ಮೈಸೂರು ಯೂನಿವರ್ಸಿಟಿಯ ಸೆನೇಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರಲ್ಲದೇ ಮತ್ತೊಬ್ಬ ಸ್ನೇಹಿತರಾದ ಶ್ರೀ ಕೆ.ಲಕ್ಕಪ್ಪನವರು ನಿಧನರಾಗಿರುವುದು ಬಹಳ ದುಃಖಕರ ಸಂಗತಿಯಾಗಿದೆ.

ಈ ಸದನದ ನಡೆವಳಿಕೆಯಲ್ಲಿ ಅವರ ಒಂದು ಪಾರ್ಟಿಸಿಪೇಷನ್ ಯಾವ ರೀತಿ ಇತ್ತುಎನ್ನುವುದು ನೆನಪಾಗುತ್ತಿದೆ. ಅವರು ತಮ್ಮ ಕರ್ತವ್ಯ ಪ್ರಜ್ಞೆಗೆ ತಾವೇ ಒಂದು ಎಚ್ಚರಿಕೆಯ ಗಂಟೆಯಾಗಿದ್ದರಲ್ಲದೆ, ಈ ಸರ್ಕಾರವನ್ನೂ ಎಚ್ಚರಿಸುವ ಒಂದು ಎಚ್ಚರಿಕೆಯ ಗಂಟೆಯಾಗಿ ಕೆಲಸ ಮಾಡುತ್ತಿದ್ದರು. ಇಂತಹವರನ್ನು ಕಳೆದುಕೊಂಡು ಈ ಸದನ ಬಡವಾಗಿದೆ. ಇವರಲ್ಲದೇ, ಮಾನ್ಯ ಶ್ರೀನಿವಾಸ ನಾಯಕ್, ಎನ್.ಹೆಚ್.ಗೌಡ, ಟಿ.ವಿ.ಚಂದ್ರಶೇಖರಪ್ಪ, ಹಲಸನಾಡ್ ಸುಬ್ಬರಾವ್, ಕಾಂತರಾಜ್ ಲಕ್ಕಪ್ಪನವರು, ಉಮರಬ್ಬನವರು, ಲಿಂಗಾರೆಡ್ಡಿಯವರು, ನ್ಯಾಯಮೂರ್ತಿ ಸೋಮನಾಥ್ ಅಯ್ಯರ್, ಕಾಪು ಸಂಜೀವಶೆಟ್ಟಿ ನಿಧನರಾಗಿ ನಮ್ಮನ್ನು ದುಃಖದ ಮಡಿಲಿನಲ್ಲಿ ಕೆಡವಿದ್ದಾರೆ. ಈ ಎಲ್ಲರಿಗೂ ಶ್ರದ್ಧಾಂಜಲಿ ಅರ್ಪಿಸುತ್ತಾ, ಅವರ ಮನೆಯವರಿಗೆ ಸಾಂತ್ವನ ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಮಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ರಾಜ್ಯಕ್ಕೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ 11ಜನ ಮಹನೀಯರುಗಳ ನಿಧನದಿಂದ ಆಗಿರತಕ್ಕ ಆಘಾತದ ಬಗ್ಗೆ ಇಲ್ಲಿ ನಿರ್ಣಯ ಮಂಡಿಸಿ ಅವರ ಬಗ್ಗೆ ಅನೇಕ ವಿಚಾರಗಳ ಬಗ್ಗೆ ತಾವು ಗುಣಗಾನ ಮಾಡಿದ್ದೀರಿ. ತಮ್ಮ ಮಾತಿನಲ್ಲಿ ನನ್ನ ಧ್ವನಿ ಸೇರಿಸುತ್ತಿದ್ದೇನೆ. ಶ್ರೀಮಾನ್ ಕೆ.ಲಕ್ಕಪ್ಪನವರು, ಎಂ.ಶ್ರೀನಿವಾಸ ನಾಯಕ್‌ರವರು, ಎನ್.ಹೆಚ್. ಗೌಡರು, ಎಂ.ಎಸ್. ಮಹಾಂತದೇವರು, ಟಿ.ವಿ. ಚಂದ್ರಶೇಖರಪ್ಪನವರು, ಹಲಸನಾಡ್ ಸುಬ್ಬರಾವ್ ಅವರು, ಕಾಂತರಾಜಪುರದ ಲಕ್ಕಪ್ಪನವರು, ಬಿ.ಎ. ಉಮರಬ್ಬನವರು, ಹೆಚ್.ಸಿ.ಲಿಂಗಾರೆಡ್ಡಿಯವರು, ಎಂ.ಆರ್. ಸೋಮನಾಥ್ ಅಯ್ಯರ್ ಅವರು, ಕಾಪು ಸಂಜೀವಶೆಟ್ಟಿಯವರ ನಿಧನದಿಂದ ಈ ನಾಡಿಗೆ ತುಂಬಲಾರದ ನಷ್ಟವಾಗಿದೆ. ಇವರುಗಳ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳುತ್ತೇನೆ. ಶ್ರೀಮಾನ್ ಲಕ್ಕಪ್ಪನವರು ಈ ಸದನದಲ್ಲಿ ಯಾವಾಗಲೂ ಇಂಗ್ಲೀಷ್ ನಲ್ಲಿ ಮಾತನಾಡುತ್ತಿರುವಾಗ ನಾನು ಎದ್ದು ಎದ್ದು ಕನ್ನಡದಲ್ಲಿ ಮಾತನಾಡಿ ಎಂದು ಹೇಳುತ್ತಾ ಇದ್ದೆ. ಅಂತಹ ಒಂದು ಸಂದರ್ಭ ಇವತ್ತು ನಮ್ಮ ಮುಂದೆ ಇಲ್ಲ.

ಆದರೂ ನನ್ನ ಮಾತಿಗೆ ನನ್ನ ಒತ್ತಾಯಕ್ಕೆ ಅವರು ಮಣೆದು ಕನ್ನಡದಲ್ಲಿ ಮಾತನಾಡುತ್ತಿದ್ದರು. ನಾನು ಲಕ್ಕಪ್ಪನವರನ್ನು ಅನೇಕ ವರ್ಷಗಳಿಂದ ಬಲ್ಲೆ. ಮಾನ್ಯ ಅಧ್ಯಕ್ಷರೇ, ತಮ್ಮ ಜೊತೆಯಲ್ಲಿ ಮತ್ತು ಮಾನ್ಯ ರಂಗನಾಥ್‌ರವರ ಜೊತೆಯಲ್ಲಿ ಪ್ರಜಾ ಸೋಷಿಯಲಿಸ್ಟ್ ಪಾರ್ಟಿ, ಅವರ ಒಂದು ಗುಂಪು ಇತ್ತು. ಅದೊಂದು ಸುವರ್ಣಯುಗ. ಅವರುಗಳು ಈ ಕಡೆಯ ಪೀಠಗಳಲ್ಲಿ ಕುಳಿತುಕೊಳ್ಳುತ್ತಾ ಇದ್ದರು. ಕೆಂಪು ಟೋಪಿಯನ್ನು ಹಾಕಿಕೊಂಡು ಇಲ್ಲಿ ಕುಳಿತುಕೊಳ್ಳುತ್ತಿದ್ದುದ್ದನ್ನು ನೋಡಿದಾಗ, ಅದು ಈ ಶಾಸನಸಭೆಯ ಸುವರ್ಣಯುಗ ಎನಿಸುತ್ತದೆ. ಶ್ರೀಮಾನ್ ಲಕ್ಕಪ್ಪನವರು

ಲೋಕಸಭೆಗೆ ಆರಿಸಿ ಹೋಗಿದ್ದರಿಂದ ನಾವು ಅವರನ್ನು ಮರೆತಿದ್ದೆವು. ಮತ್ತೆ ಅವರು ಈ ಸದನಕ್ಕೆ ಆರಿಸಿ ಬಂದು ಅವರು ನಾವು ಒಟ್ಟಿಗೆ ಸೇರಿದಂತಹ ದಿವಸಗಳನ್ನು ನಿಜವಾಗಲೂ ನೆನಸಿಕೊಳ್ಳಬೇಕು. ನಾನು ನೋಡಿದಾಗ ಅವರ ಆರೋಗ್ಯ ಬಹಳ ಕ್ಷೀಣಿಸುತ್ತಾ ಇತ್ತು. ಅದನ್ನು ಏನಾದರೂ ಮಾಡಿ ಸರಿಪಡಿಸಿಕೊಳ್ಳಬೇಕೆಂದು ಅನೇಕ ಸಾರಿ ನಾನು ಅವರಿಗೆ ಹೇಳಿದ್ದೆ. ಅವರನ್ನು ನೋಡಿ ಆಸ್ಪತ್ರೆಗೆ ಹೋಗಿ ಔಷಧಿ ತೆಗೆದುಕೊಳ್ಳಿಯೆಂದು ಹೇಳಿದ್ದೆ. ಆದರೂ ಆ ಮನುಷ್ಯನಲ್ಲಿ ಉತ್ಸಾಹ, ಅಭಿಮಾನ ಬಹಳ ಅತ್ಯಂತ ಹೆಚ್ಚಿನ ರೀತಿಯಲ್ಲಿತ್ತು. ನಮಗೆ ಲಕ್ಕಪ್ಪನವರು ಈ ಸದನದಲ್ಲಿ ಒಂದು ದೊಡ್ಡ ಆಸ್ತಿಯಾಗಿದ್ದರು. ಸದನ ಅವರನ್ನು ಕಳೆದುಕೊಂಡು ಬಡವಾಗಿದೆ. ಒಂದು ರೀತಿಯಲ್ಲಿ ನನಗೆ ಅತ್ಯಂತ ನೋವಾಗಿದೆ, ಇದು ಆಗಬಾರದಾಗಿತ್ತು. ಇದು ವಿಧಿಯ ಲೀಲೆ. ಶ್ರೀ ಉಮರಬ್ಬರವರ ಸಾವು ನನಗಂತೂ ವೈಯಕ್ತಿಕವಾಗಿ ನಷ್ಟವಾಗಿದೆ. ನಾನು ಊರಿನಲ್ಲಿದ್ದಾಗ ಅವರು ಒಂದು ದಿನದಲ್ಲಿ ಕನಿಷ್ಟ ಒಂದು ಸಾರಿಯಾದರೂ ನನ್ನನ್ನು ನೋಡತಕ್ಕ ಅಭ್ಯಾಸ ಅವರದು.

ನಾನು ಎಲ್ಲೇ ಇದ್ದರೂ ಅವರು ಬರಬೇಕು, ನನ್ನನ್ನು ಕೇಳಬೇಕು. ನಾನು ಈ ಶಾಸನಸಭೆಯಲ್ಲಿ ಇಲ್ಲದೇ ಇದ್ದಾಗಲೂ ನನ್ನ ಹತ್ತಿರ ಬಂದು ಕುಳಿತುಕೊಂಡು, ಕನ್ನಡದ ಬಗ್ಗೆ ಮಾತನಾಡಿ, ನೀವು ಏನಾದರೂ ಮಾಡಬೇಕು, ನಿಮ್ಮ ಬಗ್ಗೆ ನಾನು ಶಾಸನಸಭೆಯಲ್ಲಿ ಹೇಳುತ್ತೇನೆಂದು ಅನೇಕ ಸಾರಿ ಹೇಳುತ್ತಿದ್ದರು. ಅವರು ಸಾವನ್ನಪ್ಪಿದ್ದರೂ ಅವರು ಸತ್ತಿದ್ದರೋ ಇಲ್ಲವೋ ಎನ್ನುವುದು ಇನ್ನೂ ನನ್ನ ಮನಸ್ಸಿನಲ್ಲಿದೆ. ಅವರು ಎಂತಹ ಒಬ್ಬ ಸೊಗಸಾದ ಮನುಷ್ಯ ಸ್ನೇಹಜೀವಿ. ಬಿ.ಟಿ.ಎಸ್. ಬಸ್ ರಾಜಾಜಿನಗರದಲ್ಲಿ ಅವರಿಗೆ ಡಿಕ್ಕಿ ಹೊಡೆದಿದೆ. ಅವರು ಎಂದೂ ಹೋಗದ ಸ್ಕೂಟರಿನಲ್ಲಿ ಹೋದಾಗ ಸ್ಕೂಟರನ್ನು ರಸ್ತೆ ಹಂಪ್ಸ್ ಇರುವ ಕಡೆ ನಿಲ್ಲಿಸಿದಾಗ, ಅವರು ಸ್ಕೂಟರ್ ನಿಲ್ಲಿಸಿದ್ದು ಬಿ.ಟಿ.ಎಸ್. ಬಸ್ ಡ್ರೈವರಿಗೆ ಕಾಣಲಿಲ್ಲ. ಬಸ್ ಅವರಿಗೆ ಡಿಕ್ಕಿಯಾಗಿದೆ. ಈ ಬಿ.ಟಿ.ಎಸ್. ಬಸ್‌ನವರು ಯಾರ್ಯಾರ ಪ್ರಾಣವನ್ನು ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ. ಅದರ ಬಗ್ಗೆ ನನಗನಿಸುತ್ತದೆ, ನಾನು ಯಾರ ಬಗ್ಗೆಯೂ ಆಕ್ಷೇಪಣೆ ಮಾಡುತ್ತಿಲ್ಲ. ಶ್ರೀಉಮರಬ್ಬರವರು ಒಬ್ಬ ದೊಡ್ಡ ಮಹಾ ವ್ಯಕ್ತಿ. ಅವರು ಈ ಶಾಸನಸಭೆಯಲ್ಲಿದ್ದವರು. ಅವರು ಇನ್ನೂ ಹತ್ತಾರು ವರ್ಷಗಳ ಕಾಲ ಈ ರಾಜ್ಯದಲ್ಲಿ ಈ ದೇಶದಲ್ಲಿ ಸೇವೆ ಮಾಡಲಿಕ್ಕೆ ಅವಕಾಶವಿದ್ದಂಥ ವ್ಯಕ್ತಿ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ರೀತಿಯಲ್ಲಿ ಅವರ ಜೀವನ ಬಹಳ ತೊಂದರೆಯಲ್ಲಿತ್ತು. ಅದು ನನಗೂ ಗೊತ್ತು. ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರುತ್ತಿದ್ದೇನೆ.

ಉಮರಬ್ಬ ಅವರ ಮನೆಯ ಪರಿಸ್ಥಿತಿಯ ಬಗ್ಗೆ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಅವರ ಮನೆಯ ಪರಿಸ್ಥಿತಿ ಸರಿಹೋಗಬೇಕಾದರೆ ಸರ್ಕಾರದಿಂದ ಯಾವ ರೀತಿಯಾಗಿ ಗೌರವವಾಗಿ ಸಹಕಾರ ಮಾಡಬೇಕೋ ಅದನ್ನು ನೋಡಿ, ದಯಮಾಡಿ ಸಹಕಾರ ಮಾಡಿ. ಉಮರಬ್ಬರವರ ಮನೆಯ ಪರಿಸ್ಥಿತಿ ಬಹಳ ಅತ್ಯಂತ ಶೋಚನೀಯವಾದ ಪರಿಸ್ಥಿತಿಯಲ್ಲಿದೆ. ಅವರು ನೋಡುವುದಕ್ಕೆ ಬಹಳ ಲವಲವಿಕೆಯಿಂದ ಇದ್ದರೂ ಅವರು ಎಂದೂ ಅವರ ಪರಿಸ್ಥಿತಿಯನ್ನು ತಿಳಿಸಲಿಲ್ಲ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ. ಉಮರಬ್ಬರವರ ಕುಟುಂಬದ ಜೀವನ ಪರಿಸ್ಥಿತಿಯ ಬಗ್ಗೆ ತಾವು ಯೋಚನೆ ಮಾಡಬೇಕು. ಅದರ ಜೊತೆಗೆ ಇದೇ ರೀತಿಯಲ್ಲಿ ಸತ್ತಿರತಕ್ಕ ಯಾರ್ಯಾರು ಶಾಸಕರು ಇದ್ದಾರೆ ಅವರುಗಳ ಮನೆಯ ಪರಿಸ್ಥಿತಿಯ ಚಿಂತನೆಯ ಬಗ್ಗೆ ಸರ್ಕಾರ ಒಂದು ಪಟ್ಟಿ ಮಾಡಿ, ಪರಿಸ್ಥಿತಿಯನ್ನು ನೋಡಿ, ಅವರು ತೊಂದರೆಯಲ್ಲಿದ್ದರೆ

ಅದನ್ನು ಸರಿಪಡಿಸತಕ್ಕದ್ದು ಸರ್ಕಾರದ ಜವಾಬ್ದಾರಿ. ಅವರು ಶಾಸಕರಾಗಿದ್ದರೆ ಮಾತ್ರ ನೋಡುವುದಿಲ್ಲ. ಶಾಸಕರು ದಿವಂಗತರಾದ ಮೇಲೂ ಅವರ ಪರಿಸ್ಥಿತಿಯನ್ನು ಸರ್ಕಾರ ನೋಡಬೇಕೆಂದು ಹೇಳುತ್ತೇನೆ. ಉಮರಬ್ಬರವರೊಬ್ಬರಿಗೆ ಅಲ್ಲ, ಯಾರು ಶಾಸಕರು ತೊಂದರೆಯಲ್ಲಿದ್ದಾರೆ ಅವರ ಬಗ್ಗೆ ಚಿತ್ತೈಸಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಶ್ರೀಮಾನ್ ಹೆಚ್.ಸಿ.ಲಿಂಗಾರೆಡ್ಡಿಯವರು ಕೋಲಾರ ಜಿಲ್ಲೆಯವರು, ಆ ಜಿಲ್ಲೆಯನ್ನು ಬೆಳೆಸುವುದಕ್ಕೆ ಬಹಳ ಅಪಾರವಾದ ಸೇವೆ ಮಾಡಿದ್ದಾರೆ. ಅವರು ಸಚಿವರಾಗಿದ್ದಾಗ ನನ್ನನ್ನು ಅನೇಕ ಕಡೆ ಪ್ರವಾಸಕ್ಕೆ ಬರಲೇಬೇಕೆಂದು ಹೇಳಿ ಅವರ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಅವರೊಬ್ಬ ದೊಡ್ಡ ವ್ಯಕ್ತಿ. ಇಡೀ ನಮ್ಮ ನಾಡಿನಲ್ಲಿ ಅವರು ಅಪಾರವಾದಂತಹ ಸೇವೆಯನ್ನು ಮಾಡಿದ್ದಾರೆ. ಅವರು ಪ್ರವಾಸ ಮಾಡುವುದರಲ್ಲಿ ಅಪಾರವಾದ ಪ್ರವಾಸ ಮಾಡುತ್ತಿದ್ದರು. ಅನೇಕ ಸಾರಿ ಮುಕ್ಕಣ್ಣಪ್ಪನವರು ಲಿಂಗಾರೆಡ್ಡಿಯವರನ್ನು ಕುರಿತು ಇವರು ಟೂರಿಂಗ್ ಮಿನಿಸ್ಟರ್ ಎಂದು ಹೇಳುತ್ತಿದ್ದರು. ಅವರನ್ನು ರೇಗಿಸುವುದಕ್ಕೋಸ್ಕರ ಈ ರೀತಿ ಹೇಳುತ್ತಿದ್ದರು. ಪ್ರವಾಸ ಮಾಡಿ ಜನಗಳನ್ನು ಸ್ಪಂದಿಸಿ ಜನಗಳಿಂದ ವಿಚಾರವನ್ನು ತಿಳಿದುಕೊಳ್ಳತಕ್ಕ ಒಬ್ಬ ಮಹಾನ್ ವ್ಯಕ್ತಿ. ಶ್ರೀಮಾನ್ ಮಹಾಂತದೇವರು ಅವರು ಇಡೀ ಮೈಸೂರು ಜಿಲ್ಲೆಯ ಯಜಮಾನರಾಗಿದ್ದರು. ಮೈಸೂರು ಜಿಲ್ಲೆಯ ಎಲ್ಲ ಜನರಿಗೂ, ಎಲ್ಲ ಜಾತಿಯವರಿಗೂ ಎಲ್ಲ ವರ್ಗದವರಿಗೂ, ಎಲ್ಲ ಪಕ್ಷದವರಿಗೂ ಅವರು ಬಹಳ ದೊಡ್ಡ ಯಜಮಾನರಾಗಿದ್ದರು. ಅವರ ನಿಧನ ಮೈಸೂರು ಜಿಲ್ಲೆಗೆ ಕರ್ನಾಟಕ ರಾಜ್ಯಕ್ಕೆ ಅಪಾರ ನಷ್ಟವಾಗಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ಮಾನ್ಯ ಕಾಂತರಾಜುಪುರದ ಲಕ್ಕಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದರು. ನಾನು ಆಗ ವಿರೋಧಪಕ್ಷದಲ್ಲಿದ್ದೆ. ಈ ಕಡೆ ನಾನು ಶ್ರೀಮಾನ್ ನಂಜೇಗೌಡರು, ಶ್ರೀಮಾನ್ ಬಂಗಾರಪ್ಪನವರು ಶ್ರೀಮಾನ್ ಪುಟ್ಟದಾಸ್‌ರವರು ಕುಳಿತುಕೊಳ್ಳುತ್ತಿದ್ದೆವು. ಕಾಂತರಾಜಪುರದ ಲಕ್ಕಪ್ಪನವರು ತಮ್ಮ ಬೇಡಿಕೆಗಳನ್ನು ಮುಂಡಿಸುವುದಕ್ಕೆ ಬಂದಾಗ, ಅದರ ಹಿಂದಿನ ದಿವಸ ಪತ್ರಿಕೆಗಳಲ್ಲಿ ಅವರ ಮೇಲೆ ಕೆಲವೊಂದು ಆರೋಪಗಳು ಬಂದಿದೆ. ಆದ್ದರಿಂದ ನೀವು ಬೇಡಿಕೆಗಳನ್ನು ಮಂಡಿಸಬಾರದೆಂದು ನಾವೆಲ್ಲಾ ಎದ್ದು ನಿಂತು ಬಹಳ ದೊಡ್ಡ ಗದ್ದಲ ಮಾಡಿದಾಗ ಅವರು ಆವೊತ್ತು ತಮ್ಮ ಬೇಡಿಕೆಗಳನ್ನು ಮಂಡಿಸಲಿಲ್ಲ. ನಾನೊಂದು ದಿವಸ ನೋಡಿದೆ. ಇಲ್ಲೇ ಬೆಂಗಳೂರು ಪಕ್ಕದಲ್ಲಿ ಅವರ ತೋಟ ಇತ್ತು. ಕುಂಬಳಕಾಯಿಗಳನ್ನು ಕಾರಿನಲ್ಲಿ ಹಾಕಿಕೊಂಡು ಅವರೇ ಡ್ರೈವ್ ಮಾಡಿಕೊಂಡು ಮಾರುಕಟ್ಟೆಗೆ ಬರುತ್ತಿದ್ದರು. ಎಂತಹ ದೊಡ್ಡ ವ್ಯಕ್ತಿತ್ವ. ನಿಜವಾಗಲೂ ಸೇವೆಯನ್ನು ಮಾಡಿರತಕ್ಕಂಥ ಇಂಥ ಜನರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ನನಗಂತೂ ಬಹಳ ನೋವಾಗುತ್ತದೆ. ಕಾವೇರಿ ಸಭೆ ಸೇರಿದಾಗೆಲ್ಲ ನಾವು ಈ ರೀತಿ ಸಂತಾಪ ಸೂಚನೆಗಳನ್ನು ಮಾಡುತ್ತಿದ್ದೇವೆ. ಹಿಂದಿನ ಕಾವೇರಿ ಸಭೆ ಸೇರಿದಾಗಲೂ ಪ್ರಪಂಚದ, ವಿಶ್ವದ ಮಹಾವ್ಯಕ್ತಿ ಶ್ರೀ ರಾಜೀವ್ ಗಾಂಧಿ ಅವರ ಬಗ್ಗೆ ಒಂದು ದಿನ ಸಂತಾಪ ಸೂಚನೆಯನ್ನು ಮಾಡಬೇಕಾಯಿತು. ನಾಳೆ ಕಾವೇರಿ ಸಭೆ ಇದೆ. ಇವತ್ತು ನಾವು ನಮ್ಮನ್ನು ಅಗಲಿದವರಿಗೆ ಸಂತಾಪವನ್ನು ಸೂಚಿಸಬೇಕು. ಇಂತಹ ಸಂದರ್ಭ ಎಂದೂ ಒದಗಿ ಬಾರದೇ ಇರಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ ಮೃತರ ಆತ್ಮಕ್ಕೆ ಶಾಂತಿಯಾಗಲಿ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

+ SRI QUMURUL ISLAM (Gulbarga) : Mr. Speaker Sir, Kannada Nadu has lost eleven of its great sons who have served as members of the legislature

as also members of Parliament and served in the field of justice and other fields. One of them was our friend and colleague Mr.K.Lakkappa who is no more now. We know he was a very good parliamentarian and he was famous in raising so many important issues pertaining to Karnataka when he was the member of parliament. Also, he has done lot of work in the field of politics in Karnataka.

The other friend who is no more is Mr.B.A.Umarabba. As a member of the Committee, I was on tour. I just came to know about the demise of Mr.Umarabba and it was a shock to me. He was a very good orator and a very good member of the Assembly and we have lost such a personality.

I, on behalf of myself and on behalf of my party, pray Almighty Allah that those who are no more, let their souls be rest in peace and also pray god to give courage to their dependents and family members to bear the loss.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಈ ಸದನದಲ್ಲಿ ತಾವು ಏನು ಈ ರಾಜ್ಯಕ್ಕೋಸ್ಕರ ದುಡಿದಿರತಕ್ಕಂಥ 11 ಜನ ಮಹನೀಯರುಗಳ ನಿಧನದ ಬಗ್ಗೆ ಸಂತಾಪ ಸೂಚನೆಯನ್ನು ವ್ಯಕ್ತ ಮಾಡಿದ್ದೀರಿ, ಅದರಲ್ಲಿ ನಾನು ಸಹಿತ ಧ್ವನಿ ಗೂಡಿಸುತ್ತೇನೆ. ವಿಶೇಷವಾಗಿ ನಾನು ಮತ್ತು ಶ್ರೀ ಉಮರಬ್ಬನವರು ಆತ್ಮೀಯ ಸ್ನೇಹಿತರಾಗಿದ್ದೆವು. 1975-76ರಲ್ಲಿ ದೇಶದಲ್ಲಿ ಜಯಪ್ರಕಾಶ್ ನಾರಾಯಣ್ ರವರ ಚಳುವಳಿ ಪ್ರಾರಂಭ ಆದಂಥ ಸಂದರ್ಭದಲ್ಲಿ ಉಮರಬ್ಬನವರು ಮತ್ತು ನಾನು ಒಟ್ಟಿಗೆ ಕೆಲಸ ಮಾಡಿದ್ದೆವು. ತುರ್ತು ಪರಿಸ್ಥಿತಿಯಲ್ಲಿ ಎರಡು ವರ್ಷ ಕಾಲ ನಾನು ಜೈಲುವಾಸ ಅನುಭವಿಸಿದಾಗ ಹೊರಗಡೆಯಿಂದ ಅವರು ಅನೇಕ ರೀತಿಯಲ್ಲಿ ನನಗೆ ಸಹಾಯ ಮಾಡುತ್ತಿದ್ದರು. 1977ನೇ ಇಸವಿಯಲ್ಲಿ ನಾನು ರಾಜ್ಯದ ಯುವ ಜನತಾ ಅಧ್ಯಕ್ಷನಾಗಿದ್ದಾಗ ಅವರು ಕಾರ್ಯದರ್ಶಿಯಾಗಿದ್ದರು. ಸುಮಾರು ಎರಡು - ಮೂರು ವರ್ಷಗಳ ಕಾಲ ಇಡೀ ರಾಜ್ಯದಲ್ಲಿ ನಾವು ಪ್ರವಾಸ ಮಾಡಿ ಯುವಕರನ್ನು ಸಂಘಟನೆ ಮಾಡುತ್ತಿದ್ದೆವು. ನಿಜವಾಗಿಯೂ ಸಹಿತ ನಮ್ಮ ರಾಜ್ಯದ ಒಬ್ಬ ಉತ್ತಮ ಯುವಕ ಮುಖಂಡನನ್ನು ನಾವು ಕಳೆದುಕೊಂಡಿದ್ದೇವೆ. ಅವರು ಒಬ್ಬ ಅತ್ಯಂತ ಪ್ರತಿಭಾನ್ವಿತ ವ್ಯಕ್ತಿತ್ವ ಉಳ್ಳವರಾಗಿದ್ದರು,

ಈ ರಾಜ್ಯದಲ್ಲಿ ದುಡಿಯುವುದಕ್ಕೆ ಅವರಿಗೆ ಬಸಳ ಶಕ್ತಿ ಇತ್ತು. ಅವರು ಒಬ್ಬ ಸಾಹಿತಿ ಅಷ್ಟೇ ಅಲ್ಲ, ಕಾರ್ಮಿಕ ನಾಯಕರಾಗಿದ್ದರು, ಯುವಕ ಮುಖಂಡರು ಆಗಿದ್ದರು. ಬಡವರ ಸಮಸ್ಯೆಗಳಿಗೆ ಬಹಳ ಸ್ಪಂದನ ಮಾಡುತ್ತಿದ್ದರು. ಹಿಂದುಳಿದ ವರ್ಗಗಳ ಬಗ್ಗೆ ಅಲ್ಪ ಸಂಖ್ಯಾತರ ಬಗ್ಗೆ ಬಹಳ ಕಳಕಳಿ ಉಳ್ಳವರಾಗಿದ್ದರು. ಆ ದಿವಸ ರಾತ್ರಿ ಸುಮಾರು ಒಂದು ಗಂಟೆಯಲ್ಲಿ ಅಕಸ್ಮಿಕವಾಗಿ ನಾನು ನನ್ನ ಸ್ನೇಹಿತರನ್ನು ಬಿಡಲಿಕ್ಕೆ ಎಂದು ಆ ಕಡೆ ಹೋಗುತ್ತಿದ್ದಾಗ, ಹಾವನೂರು ಸರ್ಕಲ್ ನಲ್ಲಿ ಒಂದು ಫೋಟೋ ಹಾಕಿಬಿಟ್ಟು ಹೂವಿನಹಾರವನ್ನು ಹಾಕಿದ್ದರು. ನಾನು ಯಾರೋ ದೇಶದ ನಾಯಕರು ಸತ್ತು ಹೋಗಿರಬೇಕೆಂದು ಕಾರು ನಿಲ್ಲಿಸಿ ನೋಡಿದಾಗ, ಅದು ಉಮರಬ್ಬನವರಿಗೆ ಶ್ರದ್ಧಾಂಜಲಿ ಎಂದು ಹೇಳಿದಾಗ, ನನಗೆ ನಂಬಲಿಕ್ಕೆ ಸಾಧ್ಯವಾಗಲಿಲ್ಲ.

ಪಕ್ಕದಲ್ಲೇ ಅವರ ಮನೆ ಇದೆ. ರಾತ್ರಿ ಒಂದೂವರೆ ಗಂಟೆಯಲ್ಲಿ ಸಾವಿರಾರು ಜನ ಯುವಕರು ಅಲ್ಲಿ ಸೇರಿದ್ದರು. ನಾನು ಉಮರಬ್ಬನವರನ್ನು ನೋಡಿದ್ದೇನೆ, ನಾವು ಅವರು ಜೊತೆಯಲ್ಲೇ ಇದ್ದೆವು. ಅವರ ದೇಹವನ್ನು ನೋಡಲಿಕ್ಕೆ ನಾನು ಹೋಗಲಿಲ್ಲ. ಇವತ್ತು ನನ್ನ ಭಾವನೆಗಳನ್ನು ತಡೆದುಕೊಳ್ಳುವುದಕ್ಕೆ ನನ್ನ ಕೈಲಿ ಆಗುತ್ತಿಲ್ಲ. ನಾವು ಆಡಳಿತ ಪಕ್ಷದಲ್ಲಿದ್ದಾಗ ಅವರು ವಿರೋಧ ಪಕ್ಷದಲ್ಲಿದ್ದರು. ಉಮರಬ್ಬನವರು ನಾನು, ಡಾ.ಆಳ್ವರವರು ನಾವೆಲ್ಲ ಬಹಳ ಆತ್ಮೀಯ ಸ್ನೇಹಿತರಾಗಿದ್ದೆವು. ಆದರೆ ಸರ್ಕಾರ ಮಾಡಿದಂಥ ತಪ್ಪುಗಳನ್ನು ಅವರು ಟೀಕೆ ಮಾಡುವುದರಲ್ಲಿ ಯಾವತ್ತೂ ಸಹಿತ ಹಿಂದೆ ಮುಂದೆ ನೋಡುತ್ತಿದ್ದವರಲ್ಲ. ನನಗೆ ಗೊತ್ತದೆ 'ಚಿಲುವ ಕನ್ನಡನಾಡು' ಎನ್ನತಕ್ಕಂಥ ಪುಸ್ತಕವನ್ನು ನಾವು ಬ್ಯಾಂಕಾಕ್‌ನಲ್ಲಿ ಪ್ರಿಂಟ್ ಮಾಡಿಸುತ್ತಿದ್ದೇವೆ ಎಂದು ಹೇಳಿ ಬಹಳ ದೊಡ್ಡ ರಾದ್ಧಾಂತವನ್ನು ಅಧಿವೇಶನದ ಸಂದರ್ಭದಲ್ಲಿ ಅವರು ಮಾಡಿದ್ದರು. ಇಂತಹ ಉಮರಬ್ಬನವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ನನಗಂತೂ ವೈಯಕ್ತಿಕವಾಗಿ ಬಹಳ ನಷ್ಟವಾಗಿದೆ. ನಾವು ಎಲ್ಲಾ ಇಲಾಖೆಗಳನ್ನು ನೋಡಿದ್ದೇವೆ. ಮಾನ್ಯ ಸೇಠ್ ಸಾಹೇಬರು ನೋಡುತ್ತಿದ್ದಾರೆ. ಆದಾದನಂತರ ನಾನು ಅಪಘಾತ ನಡೆದ ಸ್ಥಳಕ್ಕೆ ಸಹಿತ ಹೋಗಿ ನೋಡಿಕೊಂಡು ಬಂದೆ.

ಕೇಸನ್ನು ಬುಕ್ ಮಾಡಿದ್ದಾರೋ ಏನೋ ಗೊತ್ತಿಲ್ಲ. ವಾಲಂಟರಿಯಾಗಿಯಾದರೂ ಕೇಸನ್ನು ಬುಕ್ ಮಾಡಿಸಬೇಕು. ಏಕೆಂದರೆ ಸುಮಾರು 2-3 ಲಕ್ಷ ರೂಪಾಯಿಗಳ ಪರಿಹಾರವನ್ನು ಕಾನೂನು ಪ್ರಕಾರವಾಗಿ ಕೊಡುವುದಕ್ಕೆ ಅವಕಾಶ ಇದೆ. ಅದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಸರ್ಕಾರ ಪರಿಹಾರವನ್ನು ಕೊಡಲೇಬೇಕು, ಮಾನ್ಯ ಮುಖ್ಯ ಮಂತ್ರಿಗಳು ಅವರಿಗೆ ಹೆಚ್ಚಿನ ಪರಿಹಾರ ಕೊಡಬೇಕು. ಏಕೆಂದರೆ, ಅವರ ಕುಟುಂಬದ ಬಗ್ಗೆ ಅವರಿಗೂ ಗೊತ್ತಿದೆ. ಜೊತೆಗೆ ವೈಯಕ್ತಿಕವಾಗಿ ಅವರಿಗೆ ಬೇಕಾಗಿದ್ದವರು. ಅವರ ಕುಟುಂಬವರ್ಗದವರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಸನ್ಮಾನ್ಯ ಎನ್.ಹೆಚ್ ಗೌಡರು ನಮ್ಮ ಪಕ್ಷದ ಸದಸ್ಯರಾಗಿದ್ದರು. ಅಧ್ಯಾಪಕ ವೃತ್ತಿಯಿಂದ ನಿವೃತ್ತಿಯಾಗುವುದಕ್ಕೆ ಮುಂಚೆಯೇ ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಂಡು, ಶಾಸಕರಾಗಿ, ಬಡವರ್ಗದ ಜನಗಳ ಬಗ್ಗೆ ಕಾಳಜಿ ಇದ್ದಂಥ ಕಾರವಾರ ಜಿಲ್ಲೆಯ ಹಾಲಕ್ಕಿ ಒಕ್ಕಲಿಗ ಜನಾಂಗಕ್ಕೆ ಸೇರಿದ ಒಬ್ಬ ಮುಖಂಡರು. ನಮ್ಮ ಪಕ್ಷವನ್ನು ಬಿಟ್ಟು ಅವರು ಬೇರೆ ಕೆಡೆಗೆ ಹೋಗಿದ್ದರು. ಆದರೂ - ವೈಯಕ್ತಿಕವಾಗಿ ಅವರ ಕುಟುಂಬದವರು ಆರ್ಥಿಕವಾಗಿ ಬಹಳ ಬಡತನದಲ್ಲಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಕಾಪು ಸಂಜೀವ ಶೆಟ್ಟರನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ.

1978ನೇ ಇಸವಿಯಲ್ಲಿ ನಮ್ಮ ಪಕ್ಷದಿಂದ ಗೆದ್ದು ಅವರು ಶಾಸಕರಾಗಿದ್ದರು. ಅವರು ಒಂದು ರೀತಿಯ ಅಜಾತಶತ್ರುವಾಗಿದ್ದರು. ಎಲ್ಲಾ ವರ್ಗದ ಜನಗಳನ್ನೂ ಸಹಿತ ವಿಶ್ವಾಸದಿಂದ ನೋಡುತ್ತಿದ್ದರು. ಅವರು ನಮ್ಮ ಪಕ್ಷದಿಂದ ಬೇರೆ ಕಡೆ ಹೋಗಿದ್ದರೂ ಸಹಿತ ನಮ್ಮವ್ವರ ಜೊತೆಯಲ್ಲೂ ಸಂಬಂಧವನ್ನು ಇಟ್ಟುಕೊಂಡಿದ್ದರು. ಇಂತಹ ಮಹನೀಯರುಗಳನ್ನು ಕಳೆದುಕೊಂಡಿರುವುದರ ಜೊತೆಗೆ ನಮ್ಮ ಹಿರಿಯರಾಗಿದ್ದಂಥ ಸನ್ಮಾನ್ಯ ಕೆ. ಲಕ್ಕಪನವರನ್ನೂ ಕಳೆದುಕೊಂಡಿದ್ದೇವೆ. ಅನೇಕ ಸಂದರ್ಭಗಳಲ್ಲಿ ಇವರು ಇಂಗ್ಲೀಷಿನಲ್ಲಿ ಮಾತನಾಡಿದಾಗ ಅಥವಾ ಹೆಚ್ಚಿಗೆ ಮಾತನಾಡಬೇಕೆಂದು ಬಯಸಿದಾಗ, ನಾವೆಲ್ಲರೂ ಎದ್ದು ನಿಂತುಕೊಂಡು ಗಲಾಟೆ ಮಾಡುತ್ತಿದ್ದೆವು. ಆದರೆ. ಅವರು ಇವತ್ತು ಸತ್ತಿದ್ದಾರೆಂದು ಹೇಳಿದರೆ ನಂಬುವುದಕ್ಕೂ ಸಾಧ್ಯವಾಗುತ್ತಿಲ್ಲ. ಅವರನ್ನು ನಾವು

ಕಳೆದುಕೊಂಡಿದ್ದೇವೆ. ನಮಗಿಂತ ಹೆಚ್ಚಾಗಿ ನಮ್ಮ ರಾಜ್ಯ ಇಂತಹ ಮಹನೀಯರುಗಳನ್ನು ಕಳೆದುಕೊಂಡಿದೆ. ನಿಜಕ್ಕೂ ಸಹಿತ ಇದು ದುಃಖಿಕರವಾದ ವಿಷಯ. ಮೃತರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ ನಾನು ಕೂಡ ತಮ್ಮ ಜೊತೆಯಲ್ಲಿ ಸೇರಿಕೊಂಡು ಅವರ ಕುಟುಂಬ ವರ್ಗದವರಿಗೆ ದುಃಖವನ್ನು ಭರಿಸುವುದಕ್ಕೆ ಭಗವಂತನು ಶಕ್ತಿಯನ್ನು ಕೊಡಲೆಂದು ಪ್ರಾರ್ಥನೆ ಮಾಡಿ, ನನಗೂ ಎರಡು ಮಾತುಗಳನ್ನು ಈ ಸಭೆಯಲ್ಲಿ ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮೃತರ ಗೌರವಾರ್ಥ ಸದನವು ಎರಡು ನಿಮಿಷ ಮೌನವನ್ನಾಚರಿಸುವುದು.

(ಸದನವು ಎದ್ದು ನಿಂತು ಮೃತರ ಗೌರವಾರ್ಥ ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಿತು)

ಅಧ್ಯಕ್ಷರು : ಶ್ರೀ ಲಕ್ಷ್ಮಪ್ಪನವರ ನಿಧನದ ಗೌರವಾರ್ಥ ಸಭೆ ಮುಂದುವರೆದು ನಾಳೆ 11 ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 12 ಗಂಟೆ 33 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 3-12-91ರಂದು ಮಂಗಳವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).